
ಜನಮನದ ದನಿ


# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ

04 ಏಪ್ರಿಲ್ 2026 ಶನಿವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ : 25 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629



ಚೆನ್ನೈನ ಎಂ.ಎ. ಚಿದಂಬರಂ ಕ್ರಿಕೆಟ್ ಮೈದಾನದಲ್ಲಿ ಶುಕ್ರವಾರ ನಡೆದ ಪಂಜಾಬ್ ಕಿಂಗ್ಸ್ ವಿರುದ್ಧದ ಐಪಿಎಲ್ ಪಂದ್ಯದಲ್ಲಿ ಚೆನ್ನೈ ಸೂಪರ್ ಕಿಂಗ್ಸ್ 209 ರನ್ ಗಳಿಸಿದೆ. ಆಯುಷ್ ಮ್ಹಾತ್ರೆ 43ಕ್ಕೆ 73...


ನಿಮಿಷಗಳನ್ನು ಕಡೆಗಣಿಸಿದವರು » 2


ಭಾರತೀಯ ಆಚರಣೆಗಳಿಗೆ ವೈಜ್ಞಾನಿಕ ಕಾರಣವಿದೆ » 3


ರಾಘವ್ ಛಡ್ಡಾ ವಿರುದ್ಧ ಎಎಪಿ ದೂರುಗಳ ಸುರಿಮಳೆ » 4

# ಸರ್ಕಾರದ ವಿರುದ್ಧ ಬಿಜೆಪಿ ಆರೋಪಗಳ ಸುರಿಮಳೆ

## ಮುಖ್ಯಮಂತ್ರಿಗೆ ಕಮಲಪಡೆ ನಾಯಕರಿಂದ ತರಾಟೆ | ಕನ್ನರಾಮಯ್ಯ ಎಂದು ಜರಿದ ಆರ್.ಅಶೋಕ್

• ಪ್ರಜೋದಯ ವರದಿ

**ಬೆಂಗಳೂರು:** ಕಾಂಗ್ರೆಸ್ ಸರ್ಕಾರದ ಆಡಳಿತ ವೈಫಲ್ಯ, ರಾಜ್ಯದಲ್ಲಿ ಡ್ರಗ್ಸ್ ಮಾಫಿಯಾ, ರೈತರ ಆತ್ಮಹತ್ಯೆ ವಿಚಾರವನ್ನು ಮುಂದಿಟ್ಟುಕೊಂಡು ರಾಜ್ಯ ಸರ್ಕಾರದ ವಿರುದ್ಧ ಬಿಜೆಪಿ ಆರೋಪ ಪಟ್ಟಿ ಬಿಡುಗಡೆ ಮಾಡಿ, ವಾಗ್ದಾಳಿ ನಡೆಸಿದೆ.

ಶುಕ್ರವಾರ ದಾವಣಗೆರೆಯಲ್ಲಿ ಚಾರ್ಜ್ ಶೀಟ್ ಬಿಡುಗಡೆಗೊಳಿಸಿದ ಬಿಜೆಪಿ ನಾಯಕರು, ಮುಖ್ಯಮಂತ್ರಿ ಸಿದ್ದಾಮಯ್ಯ ಹಾಗು ಸರ್ಕಾರವನ್ನು ತರಾಟೆಗೆ ತೆಗೆದುಕೊಂಡರು. ಈ ವೇಳೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ವಿರೋಧ ಪಕ್ಷದ ನಾಯಕ ಆರ್. ಅಶೋಕ್ ಅವರು, ಅನ್ನಭಾಗ್ಯ ಯೋಜನೆಯಡಿ ರಾಜ್ಯ ಸರ್ಕಾರ ನೀಡುತ್ತಿರುವ ಅಕ್ಕಿ ಕೇಂದ್ರ ಸರ್ಕಾರದ್ದು. ಚೀಲ ಮಾತ್ರ ಕೊಟ್ಟು ಯೋಜನೆ ತಮ್ಮದೇ ಎಂಬಂತೆ ಬಿಂಬಿಸಿಕೊಳ್ಳುತ್ತಿರುವ ಸಿದ್ದರಾಮಯ್ಯ ಅವರು ಅನ್ನ ರಾಮಯ್ಯ ಅಲ್ಲ, ಕನ್ನ ರಾಮಯ್ಯ ಎಂದು ವ್ಯಂಗ್ಯವಾಡಿದರು.

### ಸರ್ಕಾರದ ಮೇಲಿನ ದೂರಿನ ಪಟ್ಟಿ

- ಬಸ್ ಪ್ರಯಾಣ ದರ ಶೇ.15, ಮೆಟ್ರೋ ದರ ಶೇ.50ರಷ್ಟು ಹೆಚ್ಚಳ
- ಪ್ರತಿ ಯೂನಿಟ್ 4.50ರೂ. ವಿದ್ಯುತ್ ದರ 5.90 ರೂ.ಗೆ ಹೆಚ್ಚಳ
- ಅಬಕಾರಿ ಸುಂಕ ಶೇ.20ರಷ್ಟು ಏರಿಸಿಲಾಗಿದೆ
- ಸ್ಟಾಂಪ್ ಡ್ಯೂಟಿ ಅಧಿಕ

ಸಿದ್ದರಾಮಯ್ಯ ಹೇಳುವ ಆರ್ಥಿಕ ಶಿಸ್ತು ಕೇವಲ ಕಣ್ಕಟ್ಟು ವಿದ್ಯೆ. ಅಭಿವೃದ್ಧಿಗೆ ಹಣ ನೀಡದೇ, ಗ್ಯಾರಂಟಿ



ಗಳನ್ನು ಸರಿಯಾಗಿ ಅನುಷ್ಠಾನಗೊಳಿಸದೇ ಸುಳ್ಳು ಹೇಳುತ್ತಿದ್ದಾರೆ. ಗ್ಯಾರಂಟಿಗಳ ವಿಚಾರದಲ್ಲಿಯೂ ಸುಳ್ಳಿನ ಪುಂಗಿ ಊದುತ್ತಿದ್ದಾರೆಂದರು.

**ಸಿದ್ದರಾಮಯ್ಯ ಮಾಡಿದ ಸಾಲವೇ ಹೆಚ್ಚು**

ವಿಧಾನಪರಿಷತ್ ಸದಸ್ಯ ಸಿ.ಟಿ.ರವಿ ಅವರು ಮಾತನಾಡಿ, ರಾಜ್ಯದಲ್ಲಿ 22 ವರ್ಷ ಆಡಳಿತ ನಡೆಸಿದ ಮುಖ್ಯಮಂತ್ರಿಗಳಿಗಿಂತ 8 ವರ್ಷ ಅಧಿಕಾರ ನಡೆಸಿದ ಸಿದ್ದರಾಮಯ್ಯ ಅವರು ಮಾಡಿದ ಸಾಲವೇ ಹೆಚ್ಚು. ಮುಖ್ಯಮಂತ್ರಿ ಅವಧಿಯಲ್ಲಿ ಅವರು 4.30 ಲಕ್ಷ ಕೋ.ರೂ. ಸಾಲ ಮಾಡಿದ್ದಾರೆ. ರಾಜ್ಯದ ಒಟ್ಟು ಸಾಲ 8.32 ಲಕ್ಷ ಕೋ.ರೂ. ಇದೆ. ಜೆ.ಹೆಚ್.ಪಟೇಲ್, ಎಸ್.ಎಂ.ಕೃಷ್ಣ, ಧರ್ಮಸಿಂಗ್, ಹೆಚ್.ಡಿ.ಕುಮಾರಸ್ವಾಮಿ, ಬಿ.ಎಸ್. ಯಡಿಯೂರಪ್ಪ ಸೇರಿ ಹಲವು ಮುಖ್ಯಮಂತ್ರಿಗಳು ಮಾಡಿದ ಸಾಲಕ್ಕಿಂತ ಸಿದ್ದರಾಮಯ್ಯ ಅವರು ಪಡೆದ ಸಾಲ ವಿಪರೀತ ಎಂದು ಆರೋಪಿಸಿದರು.

ರಾಜ್ಯದಲ್ಲಿ ನಂದಿನಿ ಹಾಲು ಸೇರಿ ಅಗತ್ಯ ವಸ್ತುಗಳ ಬೆಲೆ ಏರಿಸಲಾಗಿದೆ. ಇಂಧನದ ಮೇಲೆ ಹೆಚ್ಚು ಸೆಸ್ ವಿಧಿಸಿ ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಏರಿಕೆಯಾಗುವಂತೆ ಮಾಡಲಾಗಿದೆ. ಬಸ್, ಮೆಟ್ರೋ, ವಿದ್ಯುತ್ ದರಗಳು ಗಗನಮುಖಿಯಾಗಿವೆ. ಅಬಕಾರಿ ಸುಂಕ, ಛಾಪಾಕಾಗದ, ಜನನ ಮತ್ತು ಮರಣ ಪ್ರಮಾಣ ಪತ್ರಗಳಿಗೂ ದರ ಏರಿಕೆ ಮಾಡಲಾಗಿದೆ. ರಾಜ್ಯದಲ್ಲಿರುವುದು ಹಗಲು ದರೋಡೆ ಸರ್ಕಾರವೆಂದು ಕುಟುಕಿದರು.

ರೈತರ ಆತ್ಮಹತ್ಯೆಯಲ್ಲಿ ಕರ್ನಾಟಕ ದೇಶದಲ್ಲಿಯೇ 2ನೇ ಸ್ಥಾನದಲ್ಲಿದೆ. ಶಿಶು ಮತ್ತು ಬಾಣಂತಿ ಸಾವು ತಡೆಯಲು ಸರ್ಕಾರಕ್ಕೆ ಸಾಧ್ಯವಾಗಿಲ್ಲ. ರಸ್ತೆ ಗುಂಡಿಗಳಿಗೆ ಬಿದ್ದು ಹಲವರು ಪ್ರಾಣ ಕಳೆದುಕೊಂಡಿದ್ದಾರೆ. ಮಾನಗೆಟ್ಟ ಸಚಿವರು ಇರುವುದು ರಾಜ್ಯ ಸಚಿವ ಸಂಪುಟದಲ್ಲಿಯೇ ಹೊರತು ಬಿಜೆಪಿಯಲ್ಲಿ ಅಲ್ಲವೆಂದು ತಿರುಗೇಟು ನೀಡಿದರು.

**ಯಾವುದು ಮಾನಗೆಟ್ಟ ಕೆಲಸ**

ಸಿದ್ದರಾಮಯ್ಯ ಬಿಜೆಪಿಯವರು ಮಾನಗೆಟ್ಟವರೆಂದು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಆದರೆ, ಮುಡಾ ಹಗರಣ ಯಾರ ಮೇಲೆ ಬಂತು. ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣಕ್ಕೆ ನಿಮ್ಮ ಸರ್ಕಾರದ ಸಚಿವರೇ ರಾಜೀನಾಮೆ ಕೊಡಬೇಕಾಯಿತಲ್ಲವೇ ವಾಲ್ಮೀಕಿ ಸಮುದಾಯದ ಹಣವನ್ನು ನಿಮ್ಮ ಒಬ್ಬ ಸಚಿವರು ಹೆಂಡತಿಗೆ ಒಡವೆ ಕೊಡಿಸಲು, ಚುನಾವಣೆಗೆ ಎಣ್ಣೆ ಸರಬರಾಜು ಮಾಡಲು ಬಳಸಿದ್ದು ಮರ್ಯಾದೆ ಇದ್ದವರು ಮಾಡುವ ಕೆಲಸವೇ ಎಂದು ಪ್ರಶ್ನಿಸಿದ್ದಾರೆ.

# ಜಿಲ್ಲಾ ಸರ್ಕಾರಿ ನೌಕರರ ಸಂಘದಿಂದ ಮಹಿಳಾ ದಿನಾಚರಣೆ



• ಪ್ರಜೋದಯ ವರದಿ

**ಹಾಸನ:** ಕ್ಷೇತ್ರದ ಶಾಸಕನಾಗಿ ಆಯ್ಕೆಯಾಗಿರುವ ನಾನು ಸಮಾಜದ ಪ್ರತಿಯೊಬ್ಬರ ಕಷ್ಟ ನಷ್ಟಗಳನ್ನು ಅರಿತು ಸ್ಪಂದಿಸುವ ಕೆಲಸ ಮಾಡುತ್ತಿದ್ದೇನೆಂದರೆ ಅದಕ್ಕೆ ಮಹಿಳೆಯರ ಆಶೀರ್ವಾದವೇ ಕಾರಣವೆಂದು ಶಾಸಕ ಹೆಚ್.ಪಿ.ಸ್ವರೂಪ್ ಅವರು ಹೇಳಿದರು.

ಜಿಲ್ಲಾ ಸರ್ಕಾರಿ ನೌಕರರ ಸಂಘದ ಕಚೇರಿಯಲ್ಲಿ ಏರ್ಪಡಿಸಿದ್ದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಹಾಗು ಸಾಧನಾ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದ ಅವರು, ಮಹಿಳೆಯರಿಗೆ ಗೌರವ ಕೊಡುವುದು ಪ್ರತಿಯೊಬ್ಬರ ಕರ್ತವ್ಯ. ಕುಟುಂಬ ನಿರ್ವಹಣೆಯಲ್ಲಿ ಸ್ತ್ರೀಯರ ಪಾತ್ರ ಮಹತ್ವದ್ದಾಗಿದೆ. ಯಾವ ಮನೆಯಲ್ಲಿ ಮಹಿಳೆ ಖುಷಿಯಿಂದ ಇರುತ್ತಾರೋ ಅಂತಹ ಕುಟುಂಬಗಳು ಸುಭಿಕ್ಷವಾಗಿರುತ್ತವೆ ಎಂದರು.

ನಾನು ಶಾಸಕನಾಗಿ ಆಯ್ಕೆಯಾಗಲು ನಮ್ಮ ತಾಯಿ, ಧರ್ಮ ಪತ್ನಿ, ಸಹೋದರಿ ಹೀಗೆ ಎಲ್ಲರ ಸಹಕಾರ ಇದೆ. ಜನಪ್ರತಿನಿಧಿಯಾಗಿ ಆಯ್ಕೆಯಾದ ಬಳಿಕವೂ ಸಹೋದರಿಯರ ಸಂಖ್ಯೆ ಹೆಚ್ಚಿದೆ ಎಂದರೆ ತಪ್ಪಾಗಲಾರದು. ಪ್ರತಿ ವರ್ಷ ನನಗೆ ರಕ್ಷಾ ಬಂಧನ ದಿನ ರಾಖಿ ಕಟ್ಟುವವರ ಸಂಖ್ಯೆ ಹೆಚ್ಚುತ್ತಲೇ ಇದ್ದು, ನನ್ನ ಕುಟುಂಬದ ಸದಸ್ಯರ ಸಂಖ್ಯೆ ವಿಶಾಲವಾಗಿದೆ. ಈ ಅವಕಾಶ ಮಾಡಿಕೊಟ್ಟ ಎಲ್ಲರಿಗೂ ಕೃತಾರ್ಥನಾಗಿರುತ್ತೇನೆ. ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಇನ್ನು ದೊಡ್ಡ ಮಟ್ಟದಲ್ಲಿ ಆಯೋಜಿಸಲು ಕ್ರಮ ವಹಿಸಲಾಗುವುದೆಂದು ಭರವಸೆ ನೀಡಿದರು.

ಜಿಲ್ಲಾ ಸರ್ಕಾರಿ ನೌಕರರ ಸಂಘದ ಬಿ.ಪಿ.ಕೃಷ್ಣೇಗೌಡ ಅವರು ಮಾತನಾಡಿ, ಮಹಿಳೆಯರಿಗೂ ಪುರುಷರಷ್ಟೇ ಸಮಾನ ಅವಕಾಶಗಳನ್ನು ಕಲ್ಪಿಸಿಕೊಡಬೇಕೆಂಬ ಉದ್ದೇಶದಿಂದ

» ನಾಲ್ಕನೇ ಪುಟದಲ್ಲಿ

# ದಾರಿ ವಿಚಾರ : ಮೂವರ ಮೇಲೆ ಮಾರಣಾಂತಿಕ ಹಲ್ಲೆ

## ಹಳೇಬೀಡು ಹೋಬಳಿ ಹಂಚಿಹಳ್ಳಿಯಲ್ಲಿ ಘಟನೆ | ಆರು ಜನರ ಬಂಧನ

• ಪ್ರಜೋದಯ ವರದಿ

**ಹಾಸನ:** ಅಧಿಕಾರಿಗಳ ನಿರ್ದೇಶನದಂತೆ ಮನೆ ಮುಂದೆ ದಾರಿ ಮಾಡಿಕೊಳ್ಳುತ್ತಿದ್ದಾಗ ಗಲಾಟೆ ಶುರು ಮಾಡಿದ ಗುಂಪೊಂದು ಮಹಿಳೆ ಸೇರಿ ಮೂವರ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿರುವ ಘಟನೆ ಬೇಲೂರು ತಾಲ್ಲೂಕು ಹಂಚಿಹಳ್ಳಿ ಗ್ರಾಮದಲ್ಲಿ ನಡೆದಿದ್ದು, ತಡವಾಗಿ ಬೆಳಕಿಗೆ ಬಂದಿದೆ.

ಗ್ರಾಮದ ಕುಮಾರ್, ರಮೇಶ ಹಾಗು ಸುಶೀಲಾ ಗಾಯಾಳುಗಳು. ಅದೇ ಊರಿನ ಗಂಗಾಬೋವಿ, ಶಿವಕುಮಾರ, ಕಿರಣ್, ಸೋಮ, ಆನಂದ, ಪ್ರತಾಪ್, ಪುನೀತ್, ಪ್ರಸನ್ನ, ನಾಗಬೋವಿ ಮತ್ತು ಮಂಜಾಬೋವಿ ಎಂಬುವವರು ಹಲ್ಲೆ ನಡೆಸಿರುವ ವಿಡಿಯೋ ಬಹಿರಂಗವಾಗಿದೆ. ಪ್ರಕರಣ ಸಂಬಂಧ ಹಳೇಬೀಡು ಠಾಣೆ ಪೊಲೀಸರು ಆರು ಜನರನ್ನು ಬಂಧಿಸಿದ್ದಾರೆ.

ಸರ್ಕಾರಿ ಜಾಗದಲ್ಲಿ ರಸ್ತೆ ನಿರ್ಮಿಸಿ ಕೊಡುವಂತೆ ಕುಮಾರ್ ಅವರು ಮಾ.21 ರಂದು ತಹಶೀಲ್ದಾರ್‌ಗೆ ಮನವಿ ಸಲ್ಲಿಸಿದ್ದರು. ಆ ಹಿನ್ನಲೆಯಲ್ಲಿ ಕಂದಾಯ ಇಲಾಖೆ ಸಿಬ್ಬಂದಿ ಅಳತೆ ಮಾಡಿ ರಸ್ತೆ ಮಾಡಿಸಿ ಕೊಟ್ಟಿದ್ದರು. ನಿಗದಿತ ಜಾಗದಲ್ಲಿ ತಂತಿ ಬೇಲಿ ಅಳವಡಿಸುತ್ತಿದ್ದಾಗ ಅಲ್ಲಿಗೆ ಬಂದ ಆರೋಪಿಗಳು ಅವಾಚ್ಯ ಶಬ್ದಗಳಿಂದ ನಿಂದಿಸುತ್ತಾ ಹಲ್ಲೆ ಮಾಡಿದ್ದರು.

**ಮಹಿಳೆ ವಿವಸ್ತ್ರಗೊಳಿಸಿ ಹಲ್ಲೆ**

ತಂತಿ ಬೇಲಿ ಹಾಕುತ್ತಿದ್ದಾಗ ಉದ್ದದ ಕೋಲುಗಳನ್ನು ಕೈಯಲ್ಲಿ ಹಿಡಿದುಕೊಂಡು ಬಂದ ಹತ್ತು ಜನರು ಮನಸೋ ಇಚ್ಚೆ ಎಲ್ಲರನ್ನೂ ಥಳಿಸಿದ್ದಾರೆ. ಗಲಾಟೆಯಲ್ಲಿ ಮಹಿಳೆ ಕೆಳಗೆ



ಬಿದ್ದಾಗ ಬಟ್ಟೆ ವಿವಸ್ತ್ರಗೊಳಿಸಿ ಹಲ್ಲೆ ಮಾಡಿದ್ದಾರೆ. ಎಷ್ಟೇ ಮನವಿ ಮಾಡಿದರೂ ಬಿಡದೆ ಕ್ರೌರ್ಯ ಮೆರೆದಿದ್ದಾರೆ. ಈ ಸಂಬಂಧ ಹಳೇಬೀಡು ಠಾಣೆಯಲ್ಲಿ ದೂರು ಪ್ರತಿದೂರು ದಾಖಲಾಗಿದೆ.

ಆರೋಪಿ ಶಿವಕುಮಾರ್ ಎಂಬಾತ 2 ದಿನಗಳ ಹಿಂದೆ ತಾನು ನಡೆಸಿದ ಕೃತ್ಯದ ವಿಡಿಯೋ ಬಿಡುಗಡೆ ಮಾಡುವ ಮೂಲಕ ನೊಂದವರ ಮನಸ್ಸಿಗೆ ಘಾಸಿ ಯುಂಟು ಮಾಡಿದ್ದಾನೆ. ಈ ಸಂಬಂಧ ಗಾಯಾಳುಗಳು ನ್ಯಾಯಕ್ಕಾಗಿ ಜಿಲ್ಲಾಧಿಕಾರಿ ಕಚೇರಿ ಮೆಟ್ಟಿಲೇರಿದ್ದಾರೆ.

**ದ್ವೇಷಕ್ಕೆ ಗ್ರಾ.ಪಂ. ಚುನಾವಣೆ ಕಾರಣ**

ಮೇಲ್ನೋಟಕ್ಕೆ ಈ ಗಲಾಟೆ ಶುರುವಾಗಿದ್ದು ದಾರಿ ವಿಚಾರಕ್ಕೆ ಎನ್ನಲಾಗಿದೆಯಾದರೂ ಅಸಲಿ ಕಾರಣ ಬೇರೆಯೇ ಇದೆ. ಕೆಲವು ವರ್ಷಗಳ ಹಿಂದೆ ಗ್ರಾಮ ಪಂಚಾಯಿತಿ ಚುನಾವಣೆಯಲ್ಲಿ ಶಿವಕುಮಾರ್ ಬೆಂಬಲಿತ ಅಭ್ಯರ್ಥಿ ಸೋಮಶೇಖರ್ ವಿರುದ್ಧ ಹಲ್ಲೆಗೆ ಒಳಗಾಗಿರುವ ಕುಮಾರ್ ಸೋತಿದ್ದರು. ಆದರೆ, ರಾಜಕೀಯ ದ್ವೇಷ ಮಾತ್ರ ಹೊಗೆಯಾಡುತ್ತಿತ್ತು. ಕುಮಾರ್ ಮೇಲೆ ದ್ವೇಷ ತೀರಿಸಿಕೊಳ್ಳಲು ಶಿವಕುಮಾರ್ ಹಾಗು ತಂಡ ಅವಕಾಶಕ್ಕಾಗಿ ಕಾದು ಕುಳಿತಿತ್ತು. ಮಾ. 21ರಂದು ಮನಸೋ ಇಚ್ಚೆ ಹಲ್ಲೆ ನಡೆಸಿ ಸೇಡು ತೀರಿಸಿಕೊಂಡಿದೆ ಎನ್ನಲಾಗಿದೆ.

# ಕಾಡಾನೆಗಳ ಓಡಿಸಲು ಬಂತು ಎಐ ಕ್ಯಾಮರಾ


## ಅರಕಲಗೂಡು ತಾಲ್ಲೂಕಿನ 2 ಕಡೆ ಅಳವಡಿಕೆ | ಜಿಲ್ಲೆಯಲ್ಲಿವೆ 83 ಆನೆ

ಮಲ್ಲಿಕಾರ್ಜುನ ಕೊಚ್ಚರಗಿ

• ಪ್ರಜೋದಯ ವರದಿ

**ಹಾಸನ:** ಮಾನವ-ವನ್ಯಜೀವಿ ಸಂಘರ್ಷ ತಡೆಗಾಗಿ ಅರಣ್ಯ ಇಲಾಖೆಯು ಎಐ (ಕೃತಕ ಬುದ್ಧಿಮತ್ತೆ) ತಂತ್ರಜ್ಞಾನದ ಮೊರೆ ಹೋಗಿದ್ದು, ಜನ ವಸತಿ ಪ್ರದೇಶದಿಂದ ಕಾಡಾನೆಗಳನ್ನು ಹಿಮ್ಮೆಟ್ಟಿಸಲು ನೂತನ ಕ್ರಮಕ್ಕೆ ಮುಂದಾಗಿದೆ.

ಜಿಲ್ಲೆಯ ಅರಕಲಗೂಡು ತಾಲ್ಲೂಕಿನ ಎರಡು ಕಡೆ ಪ್ರಾಯೋಗಿಕವಾಗಿ ಎಐ ಕ್ಯಾಮರಾ ಅಳವಡಿಸಿದ್ದು, ಸಾಧಕ-ಬಾಧಕಗಳನ್ನು ಪರಿಶೀಲಿಸಿ ಮಲೆನಾಡು ಭಾಗಕ್ಕೂ ವಿಸ್ತರಿಸುವ ಯೋಜನೆ ಹಾಕಿಕೊಳ್ಳಲಾಗಿದೆ. ಕೃತಕ ಬುದ್ಧಿಮತ್ತೆ, ಅತ್ಯಾಧುನಿಕ ಕ್ಯಾಮರಾ, ಜಿಪಿಎಸ್ ತಂತ್ರಜ್ಞಾನದ ಮೂಲಕ ಆನೆಗಳ ಚಲನವಲನ ಅರಿಯಲಾಗುತ್ತಿದೆ. ಎಐ ಕ್ಯಾಮರಾ ಮತ್ತು ಏರಿಯಲ್ ಚಿತ್ರಗಳ ಆಧಾರದಲ್ಲಿ ವನ್ಯಜೀವಿಗಳ ಮೇಲೆ ನಿಗಾ ಇರಿಸಲಾಗುತ್ತದೆ. ಸಿಬ್ಬಂದಿಯ ಕಾರ್ಯಾಚರಣೆಯ ವೇಳೆಯೂ ಈ ಚಿತ್ರಗಳನ್ನು ಬಳಸಿಕೊಳ್ಳಲಾಗುತ್ತದೆ. ಜಿಪಿಎಸ್ ಆಧಾರಿತ ಗಸ್ತು



### ಕರೆ ಮಾಡಿದರೆ ತುರ್ತು ಸ್ಪಂದನೆ

ಅರಣ್ಯ ಪ್ರದೇಶದ ಹೊರಗೆ ಕಾಡುಪ್ರಾಣಿಗಳು ಓಡಾಡುತ್ತಿರುವುದು ಸಾರ್ವಜನಿಕರ ಗಮನಕ್ಕೆ ಬಂದರೆ, ಅವರು ಅರಣ್ಯ ಇಲಾಖೆ ಸಹಾಯವಾಣಿ 1926ಕ್ಕೆ ಕರೆ ಮಾಡಿ ಮಾಹಿತಿ ನೀಡಬೇಕು. ಆ ಕರೆಯ ಮಾಹಿತಿ ರಾಜ್ಯ ಮಟ್ಟದ ಸಮಗ್ರ ನಿರ್ದೇಶನ ಮತ್ತು ನಿಯಂತ್ರಣ ಕೇಂದ್ರಕ್ಕೆ ಹೋಗಲಿದೆ. ಅಲ್ಲಿಂದ ಸಂಬಂಧಿತ ವಿಭಾಗೀಯ ಅಥವಾ ವಲಯ ಮಟ್ಟದ ನಿಯಂತ್ರಣ ಕೊಠಡಿಗೆ ನಿರ್ದೇಶನ ರವಾನೆಯಾಗುತ್ತದೆ.

> ಕಾಡಾನೆಗಳ ಚಲನವಲನದ ಮೇಲೆ ನಿಗಾ ಇಡಲು ಸುಧಾರಿತ ಎಐ ಕ್ಯಾಮರಾಗಳನ್ನು ಅರಕಲಗೂಡಿನ ಎರಡು ಪ್ರದೇಶಗಳಲ್ಲಿ ಇನ್‌ಸ್ಟಾಲ್ ಮಾಡಿದ್ದು, ಈವರೆಗೆ ಆನೆಗಳು ಕ್ಯಾಮರಾ ಕಣ್ಣಿಗೆ ಬಿದ್ದಿಲ್ಲ. ನಾವು ಅಂದುಕೊಂಡಂತೆ ಆನೆಗಳು ಕ್ಯಾಮರಾಗೆ ಸೆರೆ ಸಿಕ್ಕರೆ ಹಿಮ್ಮೆಟ್ಟಿಸುವ ಪ್ರಯತ್ನ ಸಫಲವಾದರೆ ಬೇಲೂರು, ಸಕಲೇಶಪುರ ಭಾಗದಲ್ಲೂ ಅಳವಡಿಸಲಾಗುವುದು.
>
> -ಸೌರಭ್‌ಕುಮಾರ್, ಡಿಎಫ್‌ಒ

ಪಡೆಗಳ ಸಂಪರ್ಕದಲ್ಲಿದ್ದು, ಸಾರ್ವಜನಿಕರಿಂದ ದೂರು ಬಂದೊಡನೆ ಗಸ್ತು ಪಡೆಗಳಿಗೆ ನಿರ್ದೇಶನ ಹೋಗುತ್ತದೆ. ಸೌರ ಬೇಲಿ, ರೈಲು ಕಂಬಿ ಬೇಲಿ, ಆನೆ ತಡೆ ಕಂದಕಗಳ ಮೇಲೆ ಈ ಕ್ಯಾಮರಾಗಳು ನಿಗಾ ಇರಿಸಲಿವೆ. ಇವುಗಳ ಬಳಿ ವನ್ಯಜೀವಿಗಳು ಸುಳಿದಾಗ ಸಂಬಂಧಿತ ವಲಯ ಅರಣ್ಯಾಧಿಕಾರಿ

### ಮೂಡಿಗೆರೆ ಭಾಗದಿಂದ ವಾಪಾಸ್ಸಾದ ಆನೆಗಳು

ಕಳೆದ ಮೂರು ತಿಂಗಳಿನಿಂದ ಜಿಲ್ಲೆಯ ಮಲೆನಾಡು ಭಾಗದಲ್ಲಿ ಕಾಡಾನೆಗಳ ಹಾವಳಿ ಇರಲಿಲ್ಲ. ಆಹಾರ ಅರಸಿ ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆಯತ್ತ ತೆರಳಿದ್ದ ಆನೆಗಳು ವಾಪಾಸ್ಸಾಗಿದ್ದು, ಬೇಲೂರು ತಾಲ್ಲೂಕಿನ ಕೊಗೋಡು, ಸಕಲೇಶಪುರದ ಮತ್ತೂರು ಭಾಗದಲ್ಲಿ ಪ್ರತ್ಯಕ್ಷವಾಗಿವೆ. ಪ್ರಸ್ತುತ 83 ಆನೆಗಳು ಅರಣ್ಯ ಇಲಾಖೆ ಕ್ಯಾಮರಾ ಕಣ್ಣಿಗೆ ಕಾಣಿಸಿಕೊಂಡಿವೆ. ಮೂರು ಗುಂಪುಗಳಾಗಿ ಪ್ರತ್ಯೇಕ ಸಂಚಾರ ನಡೆಸುತ್ತಿವೆ. ಕಾಫಿ ತೋಟಗಳಲ್ಲಿ ಬೀಡು ಬಿಟ್ಟಿರುವುದರಿಂದ ಫಸಲು ನಾಶವಾಗುವ ಆತಂಕವು ಬೆಳೆಗಾರರನ್ನು ಕಾಡುತ್ತಿದೆ.

» ನಾಲ್ಕನೇ ಪುಟದಲ್ಲಿ

# ಏಕಾಏಕಿ ಕುಸಿದು ಬಿದ್ದ ಸಂತೋಷ್ ಹೆಗ್ಡೆ



• ಪ್ರಜೋದಯ ವರದಿ

**ಬೆಂಗಳೂರು:** ನಿವೃತ್ತ ಲೋಕಾಯುಕ್ತ ಎನ್. ಸಂತೋಷ್ ಹೆಗ್ಡೆ ಅವರು ಕಾರ್ಯಕ್ರಮದಲ್ಲಿದ್ದಾಗಲೇ ಶುಕ್ರವಾರ ಏಕಾಏಕಿ ಕುಸಿದು ಬಿದ್ದಿದ್ದು, ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ನಗರದ ಕೊಂಡಜಿ ಬಸಪ್ಪ ಸಭಾಂಗಣದಲ್ಲಿ ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಆಯೋಜಿಸಿದ್ದ ಕಾರ್ಯಕ್ರಮದ ವೇಳೆ ಸಂತೋಷ್ ಹೆಗ್ಡೆ ಅವರು ಏಕಾಏಕಿ ಕುಸಿದು ಬಿದ್ದುದರಿಂದ ಆತಂಕ ಉಂಟಾಯಿತು. ನೀರು ಕುಡಿ ಸಿದರೂ ಚೇತರಿಕೆ ಕಾಣಲಿಲ್ಲ. ಕಾರ್ಯಕ್ರಮದಲ್ಲಿದ್ದ ವಿಧಾನ ಸಭೆಯ ಸ್ಪೀಕರ್ ಯು.ಟಿ.ಖಾದರ್ ಅವರ ಸರ್ಕಾರಿ ವಾಹನದಲ್ಲಿ ಹೆಗ್ಡೆ ಅವರನ್ನು ಖಾಸಗಿ ಆಸ್ಪತ್ರೆಗೆ ಕರೆ ದೊಯ್ಯಲಾಯಿತು. ಮಧುಮೇಹದಿಂದ ಹೆಗ್ಡೆ ಅವರು ಬಳಲುತ್ತಿದ್ದು, ರಕ್ತದ ಸಕ್ಕರೆ ಅಂಶದಲ್ಲಿ ಕುಸಿತ ಉಂಟಾಗಿದ್ದರಿಂದ ಈ ರೀತಿ ಆಗಿರಬಹುದು. ಚಿಕಿತ್ಸೆಗೆ ಸ್ಪಂದಿಸುತ್ತಿದ್ದಾರೆಂದು ವೈದ್ಯರು ತಿಳಿಸಿದ್ದಾರೆ.

# ಆರ್ಥಿಕ ಸದೃಢತೆಗೆ ಕೌಶಲ್ಯಾಧಾರಿತ ಶಿಕ್ಷಣ ಸಹಕಾರಿ

• ಪ್ರಜೋದಯ ವರದಿ

**ಹಾಸನ:** ಮನುಷ್ಯ ಸ್ವಾವಲಂಬಿಯಾಗಿ ಬದುಕಲು ಕೌಶಲ್ಯ ಅತೀ ಅಗತ್ಯ. ಯಾರ ಮುಂದೆಯೂ ಕೈಚಾಚದೆ ಆರ್ಥಿಕವಾಗಿ ಸದೃಢರಾಗಲು ಕೌಶಲ್ಯಾಧಾರಿತ ಶಿಕ್ಷಣ ಸಹಕಾರಿ ಎಂದು ಬೂಕರ್ ಪ್ರಶಸ್ತಿ ವಿಜೇತ ಸಾಹಿತಿ ಬಾನು ಮುಷ್ತಾಕ್ ಅವರು ಅಭಿಪ್ರಾಯಪಟ್ಟರು.

ನಗರದ ಕಲಾಭವನದಲ್ಲಿ ಆಯೋಜಿಸಲಾಗಿದ್ದ ದಿ ಇಂಟೆಲೆಕ್ಚುಯಲ್ಸ್ ಶಾಲೆಯ ವಾರ್ಷಿಕೋತ್ಸವ ಸಮಾರಂಭದಲ್ಲಿ ಅಭಿನಂದನೆ ಸ್ವೀಕರಿಸಿ ಮಾತನಾಡಿದ ಅವರು, ಯಾವುದೇ ಕಾರಣಕ್ಕೂ ವೃತ್ತಿಯನ್ನು ಕಡೆಗಣಿಸಬಾರದು. ವಿದ್ಯೆಯ ಜೊತೆಗೆ ವೃತ್ತಿ



ಯನ್ನು ಸಮನ್ವಯಗೊಳಿಸಿ ಬದುಕಿನಲ್ಲಿ ಮುನ್ನಡೆಯಲು ಅನೇಕ ಅವಕಾಶಗಳಿವೆ. ವಿದ್ಯೆ ಕೇವಲ ಹಣ ಗಳಿಸುವ ಸಾಧನವಾಗಿಯೇ ಅಲ್ಲ, ಅದು ವ್ಯಕ್ತಿತ್ವವನ್ನು ರೂಪಿಸಿ ಜೀವನಕ್ಕೆ ಶೋಭೆ ನೀಡುತ್ತದೆ ಹಾಗು ಸಮುದಾಯಕ್ಕೆ ಶಕ್ತಿ ತುಂಬುತ್ತದೆ ಎಂದು ಹೇಳಿದರು.

ಮುಸ್ಲಿಂ ಸಮಾಜ ತನ್ನ ಶಕ್ತಿ ಮೀರಿ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡುತ್ತಿರುವುದು ಶ್ಲಾಘನೀಯ. ಮೊಬೈಲ್ ಬಳಕೆಯಿಂದ ದೂರ ಇಟ್ಟು ಅವರ ಗಮನವನ್ನು ವಿದ್ಯಾಭ್ಯಾಸದ ಕಡೆಗೆ ಕೇಂದ್ರೀಕರಿಸಬೇಕು. ಇಂದಿನ ಮುಸ್ಲಿಂ ಸಮಾಜ ರಾಜಕೀಯ ಪ್ರಜ್ಞೆಯನ್ನು ಬೆಳೆಸಿಕೊಳ್ಳಬೇಕು. ಸಮಾಜದಲ್ಲಿ ನಾಯಕತ್ವದ ಕೊರತೆ ಕಂಡು ಬರುತ್ತಿದ್ದು, ಅದನ್ನು ಎಲ್ಲರೂ ಸೇರಿ ನಿವಾರಿಸಬೇಕಾಗಿದೆ ಎಂದು ಹೇಳಿದರು. ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪುರಸ್ಕಾರ ನೀಡಿ ಗೌರವಿಸಲಾಯಿತು.

## 2020ರ ಶಿಫಾರಸ್ಸು ಕೈಚೆಲ್ಲಿದ್ದ ಕೇಂದ್ರ ಸರ್ಕಾರ | ಅಧಿವೇಶದಲ್ಲಿ ಪುನಃ ಸಂಸದ ಶ್ರೇಯಸ್ ಪಟೇಲ್ ಪ್ರಸ್ತಾಪ

# ರಾಜಮುಡಿ ಭತ್ತಕ್ಕೆ ಜಿಐ ಟ್ಯಾಗ್ ಪಡೆಯಲು ಮತ್ತೆ ಪ್ರಯತ್ನ

• ಪ್ರಜೋದಯ ವರದಿ

**ಹಾಸನ:** ಮೈಸೂರು ರಾಜವಂಶಸ್ಥರ ಕಾಲದಿಂದಲೂ ಜಿಲ್ಲೆಯಲ್ಲಿ ಪೋಷಿಸಿಕೊಂಡು ಬಂದಿರುವ ಪಾರಂಪರಿಕ ವಿಶೇಷ ಗುಣಲಕ್ಷಣ ಹೊಂದಿರುವ ರಾಜಮುಡಿ ಭತ್ತದ ತಳಿಗೆ ಭೌಗೋಳಿಕ ಸೂಚಕ (ಜಿಐ) ಟ್ಯಾಗ್ ಪಡೆಯುವ ಪ್ರಯತ್ನ ಮತ್ತೆ ಮುಂದುವರೆದಿದೆ.

ಕಳೆದ ಹಲವು ವರ್ಷಗಳಿಂದ ಜಿಲ್ಲೆಯಲ್ಲಿ ಬೆಳೆಯುವ ರಾಜಮುಡಿ ಭತ್ತದ ತಳಿಗೆ ಜಿಐ ಟ್ಯಾಗ್ ನೀಡಬೇಕೆಂದು ಕೇಂದ್ರ ಸರ್ಕಾರವನ್ನು ಒತ್ತಾಯಿಸಿಕೊಂಡೇ ಬರಲಾಗುತ್ತಿದೆ. ಇದೀಗ ಸಂಸದ ಶ್ರೇಯಸ್ ಪಟೇಲ್ ಅವರು ಕೂಡ ಅಧಿವೇಶದಲ್ಲಿ ಮತ್ತೆ ಧ್ವನಿ ಎತ್ತಿದ್ದಾರೆ.

ಹಾಸನ ಜಿಲ್ಲೆಯಲ್ಲಿ ಬೆಳೆಯುವ ರಾಜಮುಡಿ ಭತ್ತದ ತಳಿಗೆ ಜಿಐ ಟ್ಯಾಗ್ ಪಡೆದುಕೊಳ್ಳಲು ಕರ್ನಾಟಕ ಕೃಷಿ ಬೆಲೆ ಆಯೋಗವು 2020ರಲ್ಲಿ ಶಿಫಾರಸ್ಸು ಮಾಡಿತ್ತು. ಆದರೆ, ಯಾವುದೇ ಫಲ ನೀಡಿರಲಿಲ್ಲ. ಇದೀಗ ಸಂಸದ ಶ್ರೇಯಸ್ ಅವರು ಮತ್ತೆ ಈ ಬಗ್ಗೆ ಪ್ರಸ್ತಾಪ ಮಾಡಿ, ಕೇಂದ್ರವನ್ನು ಒತ್ತಾಯಿಸಿದ್ದಾರೆ.

ರಾಜಮುಡಿ ಅಕ್ಕಿ ತನ್ನ ವಿಶಿಷ್ಟ ರುಚಿ, ಅಪರೂಪದ ಸುಗಂಧ ಮತ್ತು ಸಮೃದ್ಧ ಪೌಷ್ಟಿಕ ಮೌಲ್ಯಗಳಿಂದ ರಾಜ್ಯಾದ್ಯಂತ ಗುರುತಿಸಿಕೊಂಡಿದೆ. ಈ ತಳಿಗೆ ಜಾಗತಿಕ ಮಾನ್ಯತೆ ಸಿಕ್ಕರೆ ಹಾಸನ ಜಿಲ್ಲೆಯ ಹೆಗ್ಗಳಿಕೆ ಮತ್ತಷ್ಟು ಹೆಚ್ಚುವುದರ ಜೊತೆಗೆ ರೈತರ ಆರ್ಥಿಕ ಸ್ಥಿತಿಯೂ ಬಲಗೊಳ್ಳಲಿದೆ. ರಾಜಮುಡಿಗೆ ಜಿಐ ಮಾನ್ಯತೆ ಸಿಕ್ಕರೆ ಹೊಸ ಜೀವ ತುಂಬುವ ಜೊತೆಗೆ ರೈತರ ಬದುಕಿಗೂ ಹೊಸ ದಿಕ್ಕು ದೊರೆಯಲಿದೆ ಎಂಬ ಆಶಾಭಾವನೆ ಇದೆ.

ಕೊಡಗು ಕಿತ್ತಳೆ, ನಂಜನಗೂಡು ರಸಬಾಳೆ, ಮೈಸೂರು ಪಾಕ್ ಮೊದಲಾದ ಉತ್ಪನ್ನಗಳಿಗೆ ಜಿಐ ಮಾನ್ಯತೆ ದೊರೆತಿರುವ ರೀತಿಯಲ್ಲೇ ರಾಜಮುಡಿಗೂ ಇದೇ ಮಾನ್ಯತೆ ಸಿಗಬೇಕೆಂಬುದು ಜಿಲ್ಲೆಯ ಜನರ ಬಹುಕಾಲದ ಆಶಯವಾಗಿದೆ. ಭೌಗೋಳಿಕವಾಗಿ ನಿರ್ದಿಷ್ಟ ಪ್ರದೇಶದಲ್ಲಿ ಮಾತ್ರ ದೊರೆಯುವ ಉತ್ಪನ್ನಗಳಿಗೆ ನೀಡುವ ಜಿಐ ಟ್ಯಾಗ್, ಉತ್ಪನ್ನದ ಮೂಲ ಮತ್ತು ಗುಣ ಮಟ್ಟಕ್ಕೆ ಕಾನೂನುಬದ್ಧ ರಕ್ಷಣೆಯನ್ನು ಒದಗಿಸುತ್ತದೆ. ಹಾಸನದ ಮಣ್ಣಿನಲ್ಲಿ ಹುಟ್ಟಿ ಬೆಳೆದ ರಾಜಮುಡಿ ಅಕ್ಕಿಗೆ ಈ ಮಾನ್ಯತೆ ನೀಡುವುದು ಕಾಲದ ಅಗತ್ಯವಾಗಿದೆ.

ರಾಜಮುಡಿಗೆ ಜಿಐ ಟ್ಯಾಗ್ ದೊರೆತರೆ ರಾಷ್ಟ್ರೀಯ ಹಾಗು ಅಂತರಾಷ್ಟ್ರೀಯ ಮಟ್ಟದಲ್ಲಿ ಬೇಡಿಕೆ ಹೆಚ್ಚಾಗಲಿದೆ. ಉತ್ಪನ್ನದ ಬ್ರ್ಯಾಂಡ್ ಮೌಲ್ಯ ಹೆಚ್ಚುವುದರಿಂದ ರೈತರಿಗೆ ಉತ್ತಮ ಧಾರಣೆ ಸಿಗಲಿದೆ. ಇದರಿಂದ ಬೆಳೆ ವಿಸ್ತೀರ್ಣವೂ ಹೆಚ್ಚಾಗಿ, ರೈತರ ಆರ್ಥಿಕ ಸಬಲೀಕರಣಕ್ಕೆ ಅನುಕೂಲವಾಗಲಿದೆ.



### 6,000 ಹೆಕ್ಟೇರ್‌ನಿಂದ 2,500ಗೆ ಕುಸಿತ

ಜಿಲ್ಲೆಯಲ್ಲಿ ಒಂದು ಕಾಲದಲ್ಲಿ 6,000 ಹೆಕ್ಟೇರ್‌ಗೂ ಹೆಚ್ಚಿನ ಪ್ರದೇಶದಲ್ಲಿ ಬೆಳೆಯಲ್ಪಡುತ್ತಿದ್ದ ರಾಜಮುಡಿ ಭತ್ತದ ತಳಿ, ಇತ್ತೀಚಿನ ವರ್ಷಗಳಲ್ಲಿ ಕುಸಿತ ಕಂಡು ಕೇವಲ 2,500 ಹೆಕ್ಟೇರ್‌ಗೆ ಸೀಮಿತವಾಗಿದೆ. ಕೂಲಿ ಕಾರ್ಮಿಕರ ಕೊರತೆ, ನೀರಾವರಿ ಸಮಸ್ಯೆಗಳು ಹಾಗು ಆಧುನಿಕ ತಳಿಗಳತ್ತ ರೈತರ ಮಾರು ಹೋಗಿರುವುದ್ದರಿಂದ ಈ ಕುಸಿತಕ್ಕೆ ಪ್ರಮುಖ ಕಾರಣಗಳಾಗಿವೆ. ಇದರಿಂದ ಈ ಪರಂಪರೆಯ ತಳಿಯ ಉಳಿವೇ ಪ್ರಶ್ನೆಯಾಗಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ.

### ಏನಿದು ಜಿಐ ಟ್ಯಾಗ್

ಭೌಗೋಳಿಕ ಸೂಚ್ಯಂಕ ಒಂದು ನಿರ್ದಿಷ್ಟ ಪದಾರ್ಥ ಅಥವಾ ಊರನ್ನು ಸೂಚಿಸುತ್ತದೆ. ಕೇಂದ್ರ ಸರ್ಕಾರ ನೀಡುವ ಭೌಗೋಳಿಕ ಸೂಚ್ಯಂಕ ಪದಾರ್ಥ ಅಥವಾ ಸ್ಥಳದ ಮಹತ್ವವನ್ನು ವಿವರಿಸುತ್ತದೆ. ಜಿಐ ಟ್ಯಾಗ್ ಪಡೆದ ರಾಜ್ಯ ಸರ್ಕಾರ ಪದಾರ್ಥದ ಮೇಲಿನ ಸಂಪೂರ್ಣ ಹಕ್ಕು ಹೊಂದಿರುತ್ತದೆ. ಸರ್ಕಾರ ಪದಾರ್ಥದ ಬೆಲೆ ನಿಗದಿ ಮಾಡುವ ಹಕ್ಕು ಸಹ ಹೊಂದಿರುತ್ತದೆ. ಐಜಿ ಟ್ಯಾಗ್ ಅವಧಿ 10 ವರ್ಷ ಇರುತ್ತದೆ. ಸರ್ಕಾರಗಳು ಪ್ರತಿ 10 ವರ್ಷಕ್ಕೊಮ್ಮೆ ಐಟಿ ಟ್ಯಾಗ್ ನ್ನು ನವೀಕರಣಗೊಳಿಸಿಕೊಳ್ಳಬೇಕು. ಯಾವುದೇ ಆಹಾರ ಪದಾರ್ಥ, ತರಕಾರಿಗಳಿಗೆ ಭೌಗೋಳಿಕ ಸೂಚ್ಯಂಕ ಪಡೆಯಬೇಕಾದರೆ ರಾಜ್ಯ ಸರ್ಕಾರದ ಮೂಲಕ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಬೇಕಾಗುತ್ತದೆ.



**ಮಣ್ಣು, ಹವಾಮಾನ ಅನುಕೂಲ**

ಅರಕಲಗೂಡು, ಆಲೂರು, ಹೊಳೆನರಸೀಪುರ, ಹಾಸನ, ಬೇಲೂರು, ಸಕಲೇಶಪುರ ತಾಲ್ಲೂಕು ಸೇರಿ ಜಿಲ್ಲೆಯ ಹಲವಾರು ಭಾಗಗಳಲ್ಲಿ, ಹಾಗೆಯೇ ಹೇಮಾವತಿ ಅಣೆಕಟ್ಟು ವ್ಯಾಪ್ತಿ ಮತ್ತು ಶ್ರೀ ರಾಮದೇವರ ಕಟ್ಟೆ ಪ್ರದೇಶಗಳಲ್ಲಿ ಈ ತಳಿ ಸಾಂಪ್ರದಾಯಿಕವಾಗಿ ಬೆಳೆಯಲಾಗುತ್ತಿದೆ. ನೀರಾವರಿ ಹಾಗು ಮಳೆ ಆಧಾರಿತ ಕೃಷಿಗೆ ಸೂಕ್ತವಾಗಿರುವ ಈ ತಳಿ 145 ರಿಂದ 150 ದಿನಗಳಲ್ಲಿ ಕೊಯ್ಲಿಗೆ ಸಿದ್ಧವಾಗುತ್ತದೆ. ಹಾಸನದ ಮಣ್ಣು ಮತ್ತು ಹವಾಮಾನ ಈ ಬೆಳೆಗೆ ವಿಶೇಷ ಅನುಕೂಲಕರವಾಗಿದ್ದು, ಅದರಿಂದಲೇ ಈ ಅಕ್ಕಿಗೆ ವಿಶಿಷ್ಟ ಗುಣಲಕ್ಷಣಗಳು ಬಂದಿವೆ.

**ಮೈಸೂರು ರಾಜರಿಗೆ ಪ್ರಿಯ**

ಮೈಸೂರು ರಾಜವಂಶಸ್ಥರ ಬಳಕೆಯಲ್ಲಿ ಪ್ರಮುಖ ಸ್ಥಾನ ಪಡೆದಿದ್ದ ರಾಜಮುಡಿ ಅಕ್ಕಿಗೆ ರಾಯಲ್ ರೈಸ್ ಹಾಗು ರಾಜಭೋಗ ರೈಸ್ ಎಂಬ ಹೆಸರುಗಳೂ ಬಂದಿವೆ. ಮೈಸೂರು ಅರಸರು ಹಾಸನ ಜಿಲ್ಲೆಯಿಂದಲೇ ಈ ಅಕ್ಕಿಯನ್ನು ತರಿಸಿಕೊಳ್ಳುತ್ತಿದ್ದರೆಂಬ ಪ್ರತೀತಿ ಇದೆ. ಪ್ರತಿ ವರ್ಷ ಕೊಯ್ಲಿನ ನಂತರ ರಾಜಮುಡಿ ಅಕ್ಕಿ ಹಾಸನದಿಂದ ಮೈಸೂರಿಗೆ ರವಾನೆಯಾಗುತ್ತಿದ್ದದ್ದು ಈ ತಳಿಯ ಮಹತ್ವವನ್ನು ಸಾಬೀತುಪಡಿಸುತ್ತದೆ.

**ರಾಜಮುಡಿ ಅಕ್ಕಿ ವಿಶೇಷ**

ರಾಜಮುಡಿ ಅಕ್ಕಿ ಪೌಷ್ಟಿಕಾಂಶದ ಭಂಡಾರವೆಂದೇ ಪರಿಗಣಿಸಲಾಗಿದೆ. ಇದು ಕೆಂಪು-ಬಿಳಿ ಬಣ್ಣದ ವಿಶಿಷ್ಟ ದಾನ್ಯ. ಹೆಚ್ಚಿನ ನಾರಿನಾಂಶ, ಕಡಿಮೆ ಗ್ಲೈಸೆಮಿಕ್ ಸೂಚ್ಯಂಕ ಕಬ್ಬಿಣ, ಮೆಗ್ನೀಷಿಯಂ, ಸತು ಸಮೃದ್ಧ, ವಿಟಮಿನ್-ಬಿ ಅಂಶ ಹೆಚ್ಚಾಗಿ ಹೊಂದಿದೆ ಇದರ ಪರಿಣಾಮ ಆರೋಗ್ಯಸಚೇತನ ಗ್ರಾಹಕರಲ್ಲಿ ಇದರ ಬೇಡಿಕೆ ಹೆಚ್ಚುತ್ತಿದೆ.

# ನಿವೃತ್ತ ಯೋಧನಿಗೆ ಹುಟ್ಟೂರಿನಲ್ಲಿ ಭವ್ಯ ಸ್ವಾಗತ



• ಪ್ರಜೋದಯ ವರದಿ

**ಅರಕಲಗೂಡು :** ದೇಶದ ರಕ್ಷಣೆಯಲ್ಲಿ 22 ವರ್ಷಗಳ ಕಾಲ ಸೇವೆ ಸಲ್ಲಿಸಿ ನಿವೃತ್ತರಾಗಿ ತವರಿಗೆ ಮರಳಿದ ವೀರ ಯೋಧನಿಗೆ ತಾಲ್ಲೂಕಿನ ಜನರು ಭವ್ಯ ಸ್ವಾಗತ ಕೋರಿದರು.

ತಾಲ್ಲೂಕಿನ ನೆಹರೂನಗರ ನಿವಾಸಿ, ಯೋಧ ಮಂಜುನಾಥ್ ಅವರು ಸೇವಾ ನಿವೃತ್ತಿಯ ನಂತರ ಶುಕ್ರವಾರ ಹುಟ್ಟೂರಿಗೆ ಆಗಮಿಸಿದರು. ಸೇನಾ ಸಮವಸ್ತ್ರದಲ್ಲೇ ಬಂದಿಳಿದ ಅವರನ್ನು ಗ್ರಾಮಸ್ಥರು ಹೂಮಳೆ ಸುರಿಸಿ, ಪಟಾಕಿ ಸಿಡಿಸಿ, ಮೆರವಣಿಗೆಯೊಂದಿಗೆ ಬರಮಾಡಿಕೊಂಡರು. ಜೈ ಜವಾನ್, ಜೈ ಕಿಸಾನ್ ಘೋಷಣೆಗಳಿಂದ ಪಟ್ಟಣ ಮೊಳಗಿತು.


ಪಟ್ಟಣದ ಅ.ನ.ಕೃ. ವೃತ್ತದಲ್ಲಿರುವ ಅನಕೃ ಪ್ರತಿಮೆಗೆ ಕುಟುಂಬ ಸಮೇತರಾಗಿ ಮಾಲಾರ್ಪಣೆ ಮಾಡಿದ ಮಂಜುನಾಥ್, ತಮ್ಮ 2ದಶಕಗಳ ಸೇವಾ ಪಯಣವನ್ನು ಸ್ಮರಿಸಿ ಮಾತನಾಡಿದ ಅವರು, 2004ರ ಮಾರ್ಚ್ 17ರಂದು ಸೇನೆಗೆ ಸೇರಿದೆ. ಸಿಖಿಂದರಾಬಾದ್‌ನಲ್ಲಿ ತರಬೇತಿ ಪೂರ್ಣಗೊಳಿಸಿದ ನಂತರ ಉತ್ತರಾಖಂಡದ 614 ಇಎಂಇ ಬಟಾಲಿಯನ್‌ನಲ್ಲಿ ಮೂರು ವರ್ಷ ಸೇವೆ ಸಲ್ಲಿಸಿದೆ. ಬಳಿಕ ಭಾರತೀಯ ಸೇನೆಯ ಪ್ರತಿಷ್ಠಿತ ಫೈವ್ ಆರ್‌ಆರ್ ಬೆಟಾಲಿಯನ್‌ನಲ್ಲಿ ಜಮ್ಮು-ಕಾಶ್ಮೀರದಲ್ಲಿ ಮೂರು ವರ್ಷ ಕರ್ತವ್ಯ ನಿರ್ವಹಿಸಿದೆ. ಪಂಜಾಬ್‌ನ ಬೆಟಾಲಿಯನ್, ಪಶ್ಚಿಮ ಬಂಗಾಳದ ಬೆಟಾಲಿಯನ್ ಸೇರಿ ಉತ್ತರ ಪ್ರದೇಶ, ಬೆಂಗಳೂರು, ಅಸ್ಸಾಂ ಹಾಗು ಮತ್ತೆ ಜಮ್ಮುಕಾಶ್ಮೀರದಲ್ಲಿ ಸೇವೆ ಸಲ್ಲಿಸಿದ್ದಾಗಿ ಹೇಳಿದರು.

ಸೇನೆ ಸೇವೆ ಮುಗಿಸಿ ತವರಿಗೆ ಮರಳುವುದು ಮರುಹುಟ್ಟು ಪಡೆದ ಅನುಭವದಂತಿದೆ. ನನಗೆ ಆತ್ಮೀಯ

» ನಾಲ್ಕನೇ ಪುಟದಲ್ಲಿ

# ನಿಮಿಷಗಳನ್ನು ಕಡೆಗಣಿಸಿದವರು

ಅವರೊಬ್ಬ ಚಿತ್ರ ಕಲಾವಿದ. ಹೊರ ರಾಜ್ಯವೊಂದರಲ್ಲಿ ನೆಲೆಸಿದ್ದಾರೆ. ಮಲೆನಾಡಿನ ಹಳ್ಳಿಯೊಂದರಲ್ಲಿ ವಿಶಾಲವಾದ ಕೇಂದ್ರವೊಂದನ್ನು ಕಟ್ಟಿಸಿದ್ದಾರೆ. ಹೊರಗಿನಿಂದ ನೋಡುವ ಅಸಡ್ಡೆಯ ಕಣ್ಣುಗಳಿಗವು ವಿಶ್ರಾಂತಿ ಗೃಹಗಳಂತೆ ಕಾಣುತ್ತವೇನೋ? ಆದರೆ ಅಲ್ಲಿ ಕೃಷಿಯ ಬಗ್ಗೆ, ವಿವಿಧ ಸಸಿ, ಬೀಜ, ಬಳ್ಳಿಗಳ ಬಗ್ಗೆ ಮಾಹಿತಿ ದೊರಕುತ್ತದೆ. ಯಾವ್ಯಾವುದೋ ಹೊಸ ತಳಿಗಳು ಹುಟ್ಟಿ ನಳನಳಿಸುತ್ತವೆ. ಕಾಡಿನ ಸಂರಕ್ಷಣೆಯ ಕುರಿತು, ಸಾವಯವ ಗೊಬ್ಬರ ತಯಾರಿಸುವ ಕುರಿತು ಉದಾಹರಣೆ ಸಹಿತ ವಿವರ ದೊರೆಯುತ್ತದೆ. ಅಲ್ಲಿ ಹಳ್ಳಿಯ ಬದುಕಿನ ನಿಜವಾದ ಪರಿಕಲ್ಪನೆಯಿದೆ. ಬೇಸಿಗೆ ಶಿಬಿರಗಳಿವೆ. ಅವರು ಎಷ್ಟೋ ಕೆರೆಗಳನ್ನು ಅಭಿವೃದ್ಧಿ ಮಾಡಿದ್ದಾರೆ. ಒಟ್ಟಾರೆ ಅವವೇ ಬಿಲ್ಡಿಂಗು, ಕಂಪ್ಯೂಟರ್ರು, ಮಾಲು, ಆಫೀಸು, ಮಣ್ಣು ಮಸಿಗಳಾಚೆಗೆ ಜೀವಂತವಾದುದೇನನ್ನೋ ನೋಡಬೇಕು ಎಂದುಕೊಂಡವರೆಲ್ಲರಿಗೂ ಸಂತೃಪ್ತಿಯಾಗುವಂಥಾದ್ದೇನೋ ಅಲ್ಲಿದೆ.



ಆತ ಮೂರ್ನಾಲ್ಕು ತಿಂಗಳಿಗೊಮ್ಮೆ ಅಲ್ಲಿಗೆ ಬರುತ್ತಾರೆ. ಮೂರ್ನಾಲ್ಕು ದಿನ ಇರುತ್ತಾರೆ. ಹಾಗೆ ನೆಲೆಸಿದ ದಿನಗಳಲ್ಲಿ ಅವರು ಒಂದೊಂದು ನಿಮಿಷವನ್ನು ಕಳೆಯುವ ಬಗೆಯೂ ಅಚ್ಚರಿ ಮೂಡಿಸುತ್ತದೆ. ಶಿಬಿರಗಳು, ಕಾರ್ಯಾಗಾರಗಳು, ಕಾರ್ಯಕ್ರಮಗಳು ಇವೆಲ್ಲ ಹೇಗೂ ಆಯಿತು. ಎಲ್ಲರನ್ನೂ ವ್ಯಸ್ತವಾಗಿಡುವ ಗಂಟೆಗಳವು. ಆದರೆ ಅವುಗಳಾಚೆಗೆ ವಿರಾಮದಂತೆ ಕಾಣುವ ಒಂದೊಂದು ನಿಮಿಷವನ್ನೂ ಅವರು ಕಳೆಯುವ ಬಗೆಯೇ ಅತ್ಯಂತ ಸ್ವಾರಸ್ಯಕರವಾದದ್ದು. ಎಲ್ಲರೂ ನಗುತ್ತ, ಹರಟುತ್ತ ನಿಧಾನವಾಗಿ ಉಣ್ಣುವಾಗ ಅವರು ಮಾತ್ರ ಪಟಪಟನೆ ಉಂಡು ತಮ್ಮದೇ ಕೇಂದ್ರ ಕಟ್ಟಡಕ್ಕೊಂದು ಸುತ್ತು ಬರುತ್ತಾರೆ. ಅಲ್ಲಿರುವ ಯಾವುದೋ ವ್ಯವಸ್ಥೆಯನ್ನು ಚಿಕ್ಕದಾಗಿ ಬದಲಾಯಿಸುತ್ತಾರೆ. ಆ ತಿಂಗಳ ಕಾರ್ಯ ಪಟ್ಟಿಯಲ್ಲಿ ಹೊಸದೊಂದು ಸಾಲು ಸೇರಿಸುತ್ತಾರೆ. ಮೊಬೈಲು ತೆರೆದು ಬಂದಿರುವ ಇಮೇಲುಗಳಿಗೆ ಉತ್ತರಿಸುತ್ತಾರೆ. ದಿನಚರಿಯಲ್ಲಿ ದಾಖಲಿಸಲಿಕ್ಕೇ ಆಗದ ಕ್ಷುಲ್ಲಕ ಎನಿಸುವ ಕೆಲಸವೊಂದನ್ನು ಕಾಳಜಿಯಿಂದ ಮಾಡಿ ಮುಂದಿನ ಕಾರ್ಯಕ್ಕೆ ನಡೆಯುತ್ತಾರೆ.


ಚಿತ್ರಕಲಾವಿದರಾದ ಅವರು ಬದುಕಿನ ಪ್ರತಿಯೊಂದು ನಿಮಿಷವನ್ನೂ ಒಂದೊಂದು ಕ್ಯಾನ್ವಾಸಿನಂತೆ, ಫ್ರೇಮಿನಂತೆ ನೋಡುತ್ತಾರೆ ಎಂದು ಆಗಾಗ ಅನ್ನಿಸುವುದಿದೆ. ಇಷ್ಟೇ ಇಷ್ಟಿರುವ ಕ್ಯಾನ್ವಾಸಿನ ಯಾವ ಮೂಲೆಯನ್ನೂ ಕಡೆಗಣಿಸದೇ ಎಲ್ಲ ತುದಿಗಳಲ್ಲೂ ಬಣ್ಣದ ರೇಖೆಗಳಿಂದ ಏನೋ ಒಂದನ್ನು ಅರ್ಥಪೂರ್ಣವಾಗಿ ಚಿತ್ರಿಸುವಂತೆ ಬದುಕಿನ ಒಂದೊಂದು ಕ್ಷಣವನ್ನೂ ಚಿಕ್ಕ ಚಿಕ್ಕ ಚಟುವಟಿಕೆಯಿಂದ ತುಂಬಿಸುವ ಈ ಲವಲವಿಕೆಯೇ ಅವರನ್ನು ಇಷ್ಟು ದೊಡ್ಡ ಕಲಾವಿದರನ್ನಾಗಿಸಿದೆ. ಇರಬಹುದು ಅವರೂ ನಮ್ಮಂತೆಯೇ. ಬಿಡುವಿನ ಸಮಯದಲ್ಲಿ ರೀಲ್ಸು ನೋಡುತ್ತ. ಯಾವುದೋ ರಾಜಕೀಯದ ಪೋಸ್ಟಿಗೆ ಯಾರೂ ಕೇಳದ ಕಮೆಂಟುಗಳನ್ನು ಅಂಟಿಸುತ್ತ. ಹೆಸರೂ ಗೊತ್ತಿಲ್ಲದ ಯಾವುದೋ ಅನಾಮಧೇಯನ ಜೊತೆ ಕೋಹ್ಲಿ ಗ್ರೇಟಾ ಧೋನಿ ಗ್ರೇಟಾ ಎಂದು ವಾದ ಹೂಡುತ್ತಾ. ಸ್ವೈಪ್ ಮಾಡಿದ ಮರುಕ್ಷಣ ಮರೆತೇ ಹೋಗುವ ಹಾಸ್ಯ, ಸಿನಿಮಾ, ರಾಜಕೀಯ, ಕ್ರಿಕೇಟು, ವಿಜ್ಞಾನದ ಶಾರ್ಟ್ ವೀಡಿಯೋಗಳಿಗೆ ದಿನದ ಹತ್ತಾರು ಗಂಟೆಗಳನ್ನು ಅಡವಿಡುತ್ತಾ.

ಅವರ ದೈನಿಕವನ್ನು ನೋಡಿದಾಗ ಒಪ್ಪವಾಗಿ ಜೋಡಿಸಿಟ್ಟ, ಅಗತ್ಯವಷ್ಟೇ ಆಗಿರುವ ವಸ್ತುಗಳಿರುವ, ವ್ಯವಸ್ಥಿತವಾದ ಕೋಣೆಯಂತೆ ಕಾಣುತ್ತದೆ. ಅಲ್ಲಿ ಹಿತಮಿತವಾದ ಊಟವಿದೆ. ವ್ಯಾಯಾಮವಿದೆ. ಓದು ಇದೆ. ಮನೋರಂಜನೆಯಿದೆ. ಆಪ್ತೇಷ್ಟರ ಜೊತೆ ಚರ್ಚೆಯಿದೆ. ಪ್ರವಾಸವಿದೆ. ಇವನ್ನೆಲ್ಲ ಅವರು ಹೇಗೆ ಸಾಧಿಸಿದರು ಎಂದು ನೋಡುವಾಗ ಅರ್ಥವಾಗುವ ಮೊದಲ ಅಂಶ ಅವರ ಒಂದು ದಿನದಲ್ಲಿ ನಮ್ಮಂತೆ ಇಪ್ಪತ್ನಾಲ್ಕು ಗಂಟೆಗಳಿಲ್ಲ. ಬದಲಿಗೆ ಸಾವಿರದ ನಾನೂರ ನಲವತ್ತು ನಿಮಿಷಗಳಿವೆ! ದಿನವನ್ನು ಗಂಟೆಗಳಾಗಿ ವಿಭಾಗಿಸಿಕೊಂಡ ನಾವು ಅದೆಷ್ಟು ನಿಮಿಷಗಳನ್ನು ಚಿಲ್ಲರೆಗಳಂತೆ ಕಳೆಯುತ್ತೇವಲ್ಲವೇ? ಬೆಳಗ್ಗೆ ಆರೂ ಮೂವತ್ತಕ್ಕೆ ಎಚ್ಚರವಾದರೂ ಏಳಕ್ಕೆ ಏಳೋಣ ಎಂದು ಹೊದ್ದು ಮಲಗುತ್ತೇವೆ. ಮೂವತ್ತು ನಿಮಿಷಗಳನ್ನು ಕಳೆದುಕೊಳ್ಳುತ್ತೇವೆ. ಊಟ ಮಾಡುವ ಮಧ್ಯಾಹ್ನದ ಒಂದು ಗಂಟೆಗೆ ಇನ್ನೂ ಅರ್ಧ ಗಂಟೆಯಿದೆ. ಹಿತ್ತಲಲ್ಲೇನೋ ಕೆಲಸವಿದೆ. ಊಟವಾದ ಬಳಿಕ ಮಾಡೋಣವೆಂದು ಮೊಬೈಲು ಹಿಡಿದು ಆ ಅರ್ಧ ಗಂಟೆಯನ್ನು ವ್ಯಯಿಸುತ್ತೇವೆ. ಮನೆಯಿಂದ ಆಫೀಸಿಗೆ ಹೋಗುವ ಮೆಟ್ರೋ ಪ್ರಯಾಣದಲ್ಲಿ ಇಪ್ಪತ್ತು ನಿಮಿಷ ಬಿಡುವಿದೆ. ಅದೂ ಒಂದು ಸಮಯ, ಅವಕಾಶ, ಅವಧಿ ಎಂದು ನಾವು ಪರಿಗಣಿಸಿಯೇ ಇಲ್ಲ! ಅದಕ್ಕೆ ವ್ಯಯವಾಗುವ ಕಾಲವೂ ನಮ್ಮ ಆಯಸ್ಸಿನಿಂದಲೇ ಮೈನಸ್ ಆಗುತ್ತದೆ ಎನ್ನುವುದು ನಮಗೆ ಗೊತ್ತೇ ಇಲ್ಲ!

ನಿಮಿಷಗಳನ್ನು ಕಡೆಗಣಿಸಿದವರ ಬಾಳಿನಿಂದ ನನಗೆ ಟೈಮೇ ಇಲ್ರೀ ಎನ್ನುವ ವರಾತ ಯಾವಾಗಲೂ ಎದ್ದು ಬರುತ್ತಲೇ ಇರುತ್ತದೆ. ನಮ್ಮ ಲೆಕ್ಕಾಚಾರದಲ್ಲಿ ಸಮಯ, ಕಾಲಾವಕಾಶ ಎಂದರೆ ಒಂದಿಡೀ ದಿನ. ಇಲ್ಲವೇ ಹತ್ತಾರು ಗಂಟೆಗಳ ಒಂದು ಹಗಲು. ಅಥವಾ ಕೆಲವಾದರೂ ಗಂಟೆಗಳು. ಕನಿಷ್ಠ ಒಂದು ಗಂಟೆ. ಅದಕ್ಕಿಂತ ಕಡಿಮೆಯಾದ ಸಮಯವನ್ನು ನಾವು ಕಾಲಾವಕಾಶ ಎಂದು ಪರಿಗಣಿಸುವುದೇ ಇಲ್ಲ! ಇನ್ನು ಇಪ್ಪತ್ತು ನಿಮಿಷ ಮಲಗಿ ಏಳಕ್ಕೆ ಏಳೋಣ ಎಂದು ಎಚ್ಚರಾದ ಮೇಲೂ ಮಲಗಿದ ಹೆಚ್ಚುವರಿ ನಿಮಿಷಗಳನ್ನೇ ಒಟ್ಟಾಗಿ ಸೇರಿಸಿದರೆ ವರ್ಷದಲ್ಲಿ ಐದಾರು ದಿನಗಳಷ್ಟಾಗುತ್ತದೆ. ಬಸ್ಸು, ಮೆಟ್ರೋಗಳಲ್ಲಿ ನಿತ್ಯ ಪ್ರಯಾಣಿಸುವ ಒಂದೆರಡು ಗಂಟೆಗಳಂತೂ ವರ್ಷಕ್ಕೆ ಬದಲಾಯಿಸಿದಾಗ ತಿಂಗಳುಗಳೇ ಆಗುತ್ತವೆ! ಹೀಗೆ ತುಣುಕು ತುಣುಕುಗಳಾಗಿ ಕಳೆದುಕೊಂಡ ಒಟ್ಟು ಸಮಯ ಹೆಚ್ಚೂ ಕಡಿಮೆ ವರ್ಷದ ಕಾಲು ಭಾಗಕ್ಕಿಂತ ಹೆಚ್ಚಿದೆ!

ಈ ಮನಸ್ಥಿತಿಗೆ ಮುಖ್ಯ ಕಾರಣ ಆದಾಯ ಸೃಜಿಸದ, ದೈನಿಕಕ್ಕೆ ಅತ್ಯವಶ್ಯಕವಲ್ಲದ ಎಲ್ಲವನ್ನೂ ನಾವು ವ್ಯರ್ಥ ಎಂದು ಪರಿಗಣಿಸಿರುವುದು. ಉದಾಹರಣೆಗೆ ಹೂ ಬಿಡದ ಗಿಡವೊಂದು ಪಾಟಿನಲ್ಲಿದ್ದರೆ ನಾವು ಕಿತ್ತು ಎಸೆಯುತ್ತೇವೆ. ತನ್ನಷ್ಟಕ್ಕೆ ತಾನೇ ಅಗೋಚರವಾಗಿ ಈ ಪರಿಸರಕ್ಕೆ ಅದು ಕೊಡುತ್ತಿರುವ ಕೊಡುಗೆಯನ್ನು ನೋಡುವಂಥ ಒಳಗಣ್ಣು ನಮಗೆ ಇಲ್ಲವೇ ಇಲ್ಲ. ನಮ್ಮ ದೃಷ್ಟಿಯಲ್ಲಿ ಕೊಡುಗೆ ಎಂದರೆ ಹೂವು, ಕಾಯಿ, ಹಣ್ಣು, ಹಣ ಮಾತ್ರ. ಓದುವುದು, ಕೆಟ್ಟು ನಿಂತ ಮಿಕ್ಸಿಯನ್ನು ನಾವೇ ರಿಪೇರಿ ಮಾಡಲೆತ್ನಿಸುವುದು, ಆವರಣದಲ್ಲೊಂದಷ್ಟು ಚಿಕ್ಕ ಗಿಡಗಳನ್ನು ನೆಡುವುದು, ಶೋಕೇಸಿನ ಧೂಳು ಕೊಡವುವುದು, ಹಿಂದುಗಡೆ ಬಾಗಿಲಿನ ಬಳಿ ತೆವಳುತ್ತ ಹೋಗುತ್ತಿರುವ ಒನಕೆ ಹುಳವನ್ನು ಹಿಂಬಾಲಿಸಿ ಅನೂಹ್ಯ ಪ್ರಪಂಚವನ್ನು ತಲುಪುವುದು ಇವ್ಯಾವುದನ್ನೂ ಮಾಡಲೇಬೇಕಾದ ಅನಿವಾರ್ಯತೆಯಿಲ್ಲವಾದ್ದರಿಂದ, ಇದೆಲ್ಲದರಿಂದ ಹಣ ಸಿಗುವುದಿಲ್ಲವಾದ್ದರಿಂದ, ಮಾಡದಿದ್ದರೆ ಯಾವ ಬಾಸೂ ಎಸ್ಕಿಲೇಷನ್ ಇಮೇಲ್ ಬರೆಯುವುದಿಲ್ಲವಾದ್ದರಿಂದ ನಾವು ಇವ್ಯಾವುದೂ ಮಾಡುವುದಿಲ್ಲ. ಆದರೆ ಅದಕ್ಕಿಂತ ವ್ಯರ್ಥವಾದ ಗಾಸಿಪ್, ನ್ಯೂಸ್, ರೀಲ್ಸ್, ಕಮೆಂಟುಗಳಲ್ಲಿ ಸಮಯ ಕಳೆದು ಒಳಗೊಳಗೇ ಟೊಳ್ಳಾಗಿ ದಿನವನ್ನು ಸಮಾಪ್ತಿ ಮಾಡುತ್ತೇವೆ.

ಬಿಡುವಿನ ನಿಮಿಷಗಳಲ್ಲಿ ನಾವು ಕೈಗೊಳ್ಳುವ ಚಿಕ್ಕ ಚಿಕ್ಕ ವ್ಯವಸ್ಥಿತ ಕಾರ್ಯಗಳು ನಮ್ಮ ಒಳಗನ್ನು ರೂಪಿಸುತ್ತವೆ. ಮಲಗಿ ಎದ್ದ ದಿಂಬನ್ನು ಹಾಸಿಗೆಯ ತುದಿಯಲ್ಲಿ ಒಪ್ಪವಾಗಿ ಇಡುವುದಕ್ಕೂ, ಕೊಂಚ ಕೆಳಗೆ ಹಾಗೇ ಬಿಡುವುದಕ್ಕೂ ನಡುವಿನ ಅಂತರ ಕೆಲವೇ ಸೆಂಟೀಮೀಟರುಗಳಷ್ಟಾದರೂ ಅದನ್ನು ಆ ಎರಡು ಬೇರೆ ಬೇರೆ ಜಾಗಗಳಲ್ಲಿಟ್ಟ ವ್ಯಕ್ತಿಯ ವ್ಯಕ್ತಿತ್ವದ ನಡುವಿನ ವ್ಯತ್ಯಾಸ ಮೈಲಿಗಳಷ್ಟು! ಇನ್ನು ನಮ್ಮ ಇನ್ನೊಂದು ಸಮಸ್ಯೆಯೆಂದರೆ ಹೆಚ್ಚಿನ ಸಲ ನಮ್ಮನ್ನು ಹೆಚ್ಚಾಗಿ ತೊಡಗಿಸಿಕೊಂಡಿದ್ದರೂ ಆದಾಯವಲ್ಲದ ಕಾರ್ಯಗಳ ಆಳಕ್ಕೆ ನಾವು ಇಳಿಯುವುದೇ ಇಲ್ಲ. ವಾರಕ್ಕೊಂದು ಸಿನಿಮಾ ನೋಡಿದರೂ ಅದರ ತಾಂತ್ರಿಕ ವಿಷಯಗಳಾಗಲೀ, ಸೃಜನಶೀಲ ಸೂಕ್ಷ್ಮಗಳಾಗಲೀ ಅರ್ಥವಾಗಿರುವುದೇ ಇಲ್ಲ. ವರ್ಷಗಳಿಂದ ಕ್ರಿಕೇಟ್ ನೋಡುತ್ತಿದ್ದರೂ ಗುಡ್ ಲೆಂತ್, ಲೋ ಫಿಲ್ಟಾಸ್, ಹಿಟ್ಟಿಂಗ್ ದ ಡೆಕ್ ಹಾರ್ಡ್, ಪ್ಲೇಸ್ಮೆಂಟ್, ಎಕಾನಾಮಿಕಲ್



> ಬಿಡುವಿನ ನಿಮಿಷಗಳಲ್ಲಿ ನಾವು ಕೈಗೊಳ್ಳುವ ಚಿಕ್ಕ ಚಿಕ್ಕ ವ್ಯವಸ್ಥಿತ ಕಾರ್ಯಗಳು ನಮ್ಮ ಒಳಗನ್ನು ರೂಪಿಸುತ್ತವೆ. ಮಲಗಿ ಎದ್ದ ದಿಂಬನ್ನು ಹಾಸಿಗೆಯ ತುದಿಯಲ್ಲಿ ಒಪ್ಪವಾಗಿ ಇಡುವುದಕ್ಕೂ, ಕೊಂಚ ಕೆಳಗೆ ಹಾಗೇ ಬಿಡುವುದಕ್ಕೂ ನಡುವಿನ ಅಂತರ ಕೆಲವೇ ಸೆಂಟೀಮೀಟರುಗಳಷ್ಟಾದರೂ ಅದನ್ನು ಆ ಎರಡು ಬೇರೆ ಬೇರೆ ಜಾಗಗಳಲ್ಲಿಟ್ಟ ವ್ಯಕ್ತಿಯ ವ್ಯಕ್ತಿತ್ವದ ನಡುವಿನ ವ್ಯತ್ಯಾಸ ಮೈಲಿಗಳಷ್ಟು! ಇನ್ನು ನಮ್ಮ ಇನ್ನೊಂದು ಸಮಸ್ಯೆಯೆಂದರೆ ಹೆಚ್ಚಿನ ಸಲ ನಮ್ಮನ್ನು ಹೆಚ್ಚಾಗಿ ತೊಡಗಿಸಿಕೊಂಡಿದ್ದರೂ ಆದಾಯವಲ್ಲದ ಕಾರ್ಯಗಳ ಆಳಕ್ಕೆ ನಾವು ಇಳಿಯುವುದೇ ಇಲ್ಲ. ವಾರಕ್ಕೊಂದು ಸಿನಿಮಾ ನೋಡಿದರೂ ಅದರ ತಾಂತ್ರಿಕ ವಿಷಯಗಳಾಗಲೀ, ಸೃಜನಶೀಲ ಸೂಕ್ಷ್ಮಗಳಾಗಲೀ ಅರ್ಥವಾಗಿರುವುದೇ ಇಲ್ಲ.

ಎನ್ನುವ ಮುಖ್ಯ ಅಂಶಗಳ ಅರಿವಿಲ್ಲದೆ ಬರಿದೆ ರನ್-ವಿಕೆಟ್ ಎಂದು ಅಂಕಿ-ಅಂಶಗಳ ಬೆನ್ನು ಹತ್ತಿ ವಾದಮಾಡಿಕೊಂಡಿರುತ್ತೇವೆ. ನಮ್ಮ ಅಭಿಮಾನ, ಆಸಕ್ತಿಗಳೆಲ್ಲ ಯಾರು ಶ್ರೇಷ್ಠ ಎಂಬ ವಾದಕ್ಕೆ ಅಥವಾ ಇನ್ಯಾರನ್ನೋ ಟೀಕಿಸುವ ಕಟುಕಿಗಳಿಗೇ ಸೀಮಿತವಾಗಿರುತ್ತದಲ್ಲದೇ ಆರೋಗ್ಯಕರವಾದ ವಿಶ್ಲೇಷಣಾತ್ಮಕ ದೃಷ್ಟಿಯೊಂದು ಬೆಳೆಯುವುದೇ ಇಲ್ಲ. ಗಾರ್ಡನ್ನಿನಲ್ಲಿ ಅಚಾನಕ್ಕಾಗಿ ಸತ್ತ ಗಿಡ ನಮ್ಮ ಕುತೂಹಲಕ್ಕೆ ಕೆಲಸ ಕೊಡುವುದೇ ಇಲ್ಲ.

ಹಾಗಂತ ಎಲ್ಲದರಲ್ಲೂ ವಿಜ್ಞಾನಿಗಳಾಗಬೇಕೆಂದಲ್ಲ. ಆದರೆ ನೂರಾರು ಮಾಯಮಂತ್ರಗಳ, ಯಕ್ಷಿಣಿಗಳ ಜಾದೂಗಾರಿ ವೇದಿಕೆಯಂತಿರುವ ನಮ್ಮ ಪ್ರಕೃತಿಯೆಡೆಗೆ ಸಣ್ಣ ಕುತೂಹಲವನ್ನೂ ಬೆಳೆಸಿಕೊಳ್ಳದಿದ್ದರೆ ನಮ್ಮ ವ್ಯಕ್ತಿತ್ವ ಒಳಗೊಳಗೇ ಟೊಳ್ಳಾಗುತ್ತ ಹೋಗುತ್ತದೆ. ಕಚೇರಿಯ ಕೆಲಸದಾಚೆಗಿನ ಬದುಕು ಬಹಳ ಬೇಗ ಬೋರಾಗುತ್ತದೆ. ಶನಿವಾರ, ಭಾನುವಾರಗಳಲ್ಲಿ ಸಮಯ ಕಳೆಯುವ ಉಪಾಯಗಳಿಗಾಗಿ ತಡಕಾಡುತ್ತೇವೆಂದರೆ ಬದುಕಿನಲ್ಲಿ ಅಭಿರುಚಿಯನ್ನೇ ಕಳೆದುಕೊಂಡಿದ್ದೇವೆಂದರ್ಥ. ನಮ್ಮ ದಿನ ಕುತೂಹಲಕಾರಿಯಾಗಬೇಕೆಂದರೆ ಪ್ರತೀ ದಿನ ಐಪಿಎಲ್ಲೋ, ವರ್ಲ್ಡ್ ಕಪ್ಪೋ, ದೊಡ್ಡ ನಟರ ಸಿನಿಮಾ ಬಿಡುಗಡೆಯೋ, ಯಾವುದೋ ನಟ-ನಟಿಯ ವಿವಾದವೋ, ಇನ್ಯಾವುದೋ ಹುಚ್ಚು ನರ್ತನದ ವೈರಲ್ ರೀಲೋ ಬರುತ್ತಲೇ ಇರಬೇಕಾಗುತ್ತದೆ. ಇಂಥಾ ನಿರುಪಯುಕ್ತ ಸಂಗತಿಗಳಿಂದ ಉನ್ಮಾದಿತರಾಗಿ ಬದುಕುವ ವ್ಯಕ್ತಿತ್ವಗಳು ಸಮಾಜವನ್ನು ಮತ್ತಷ್ಟು ಅಸೂಕ್ಷ್ಮವಾದ, ಅಸಂವೇದನಾಶೀಲವಾದ ಯಾಂತ್ರಿಕ ಸಂದಣಿಯಾಗಿಸಿ ಹೋಗುತ್ತವೆ ಹಾಗೂ ಆ ಸಮಾಜದ ಅಂತಿಮ ಪರಿಣಾಮ ಶೋಚನೀಯವಾಗಿರುತ್ತದೆ.

ಬದುಕು ಚಿಕ್ಕ ಚಿಕ್ಕ ಆಸಕ್ತಿಗಳ ಸಣ್ಣ ಸಣ್ಣ ನಿಮಿಷಗಳಲ್ಲಿದೆ.

**- ವಿನಾಯಕ** ಅರಳಸುರಳಿ

# ವಿಚಿತ್ರ ಭಾವ

ನನ್ನ ತಾಯಿ ದೈವೀ ಸ್ವರೂಪಿ, ನನ್ನ ತಂದೆ ಮುಗ್ದ ಮತ್ತು ಶ್ರಮ ಜೀವಿ, ನನ್ನ ಅಜ್ಜ ಅಜ್ಜಿ ನಿಷ್ಕಲ್ಮಶ ಮನಸ್ಸಿನವರು, ನನ್ನ ಹೆಂಡತಿ ಪ್ರೀತಿಯ ಸಾಗರ, ನನ್ನ ಅಣ್ಣ ಮಮತೆಯ ಸಾಕಾರ ಮೂರ್ತಿ, ನನ್ನ ಅತ್ತಿಗೆ ಮಮತಾಮಯಿ, ನನ್ನ ತಂಗಿ ಕರುಣಾಮಯಿ, ನನ್ನ ಗಂಡ ದಕ್ಷ, ಪ್ರಾಮಾಣಿಕ, ನನ್ನ ಮಗ, ಮಗಳು ಅತ್ಯಂತ ಸಹೃದಯಿಗಳು, ಹೀಗೆ ಸಾಮಾನ್ಯವಾಗಿ ಎಲ್ಲರೂ ಬೇರೆ ಬೇರೆ ಸಂಧರ್ಭಗಳಲ್ಲಿ ತಮ್ಮವರ ಬಗ್ಗೆ ಅದರಲ್ಲೂ ರಕ್ತ ಸಂಬಂಧಿಗಳ ಬಗ್ಗೆ ಹೇಳುತ್ತಿರುತ್ತಾರೆ.( ಕೆಲವು ಅಪರೂಪದ ಅಪವಾದಗಳು ಇರಬಹುದು. ಇತ್ತೀಚೆಗೆ ಕೆಟ್ಟದಾಗಿ ಸಹ ಹೇಳುತ್ತಾರೆ )

ಆದರೆ ಬಹುತೇಕ ಜನರ ಅಭಿಪ್ರಾಯ ಇದೇ ಆಗಿರುತ್ತದೆ. ಹಾಗಾದರೆ ಇಷ್ಟೊಂದು ಒಳ್ಳೆಯವರಿಂದ ಕೂಡಿರುವ ನಮ್ಮ ಸಮಾಜ ಅತ್ಯಂತ ಆದರ್ಶ ನಾಗರಿಕ ಸಮಾಜವಾಗಿರಬೇಕಿತ್ತಲ್ಲವೇ? ಈ ಭ್ರಷ್ಟಾಚಾರ, ಮೋಸ, ವಂಚನೆ, ನಂಬಿಕೆ ದ್ರೋಹ, ಡಾಕ್ಟರ್, ಲಾಯರ್, ಪೋಲೀಸ್, ರಾಜಕಾರಣಿ, ಕಂಟ್ರಾಕ್ಟರ್ ಮುಂತಾದ ಸಮಾಜದ ಎಲ್ಲಾ ಕ್ಷೇತ್ರದ ಜನರ ಮೇಲೆ ಅನುಮಾನ ಏಕೆ. ಇವರೆಲ್ಲರೂ ನಮ್ಮ ತಾಯಿ, ತಂಗಿ, ಅಣ್ಣ, ಅಕ್ಕ, ಅಪ್ಪ, ಅಮ್ಮ, ಮಕ್ಕಳಲ್ಲಿ ಒಬ್ಬರಾಗಿರಬೇಕಲ್ಲವೇ? ಆದರೂ ಏಕೆ ವ್ಯವಸ್ಥೆ ಹೀಗಿದೆ.

ಸಮಸ್ಯೆ ಇರುವುದೇ ಇಲ್ಲಿ. ಸಮಾಜದ ಒಟ್ಟು ಹಿತದ ದೃಷ್ಟಿಯಲ್ಲಿ ನಾವು ಇವರನ್ನು ನೋಡುವುದಿಲ್ಲ. ನಮ್ಮ ವೈಯಕ್ತಿಕ ಬದುಕಿನ ಸ್ವಾರ್ಥದ ಹಿತದಿಂದ ಇವರನ್ನು ಗುರುತಿಸುತ್ತೇವೆ. ಹೆಚ್ಚು ಲಂಚ ತಂದು ಮನೆ, ಕಾರು, ಒಡವೆ, ಪ್ರವಾಸ ಮುಂತಾದ ಮೋಜು ಮಾಡುವ ಮತ್ತು ಮಾಡಿಸುವ ವ್ಯಕ್ತಿ, ಹೆಂಡತಿ ಮಕ್ಕಳಿಗೆ, ತಂದೆ ತಾಯಿಗಳಿಗೆ ಅತ್ಯಂತ ಪ್ರೀತಿ ಪಾತ್ರವಾಗುತ್ತಾನೆ. ಗಂಡನಿಗೆ ಅಥವಾ ಮಗನಿಗೆ ಬರುವ ಸಂಬಳದಲ್ಲಿ ಇಷ್ಟೊಂದು ಅದ್ದೂರಿ ಜೀವನ ಸಾಧ್ಯವಿಲ್ಲ. ಇದು ಲಂಚದ ಹಣವೇ ಎಂದು ಗೊತ್ತಿದ್ದರೂ ಅದನ್ನು ಸಾಮಾನ್ಯವಾಗಿ ಯಾರೂ ಪ್ರಶ್ನಿಸುವುದಿಲ್ಲ.


ಪ್ರಿಯಕರನಿಗೆ ಅಥವಾ ಗಂಡನಿಗೆ ಮೋಸ, ವಂಚನೆ ಮಾಡಿದ ಹೆಣ್ಣು ನಮ್ಮ ಅಕ್ಕ, ತಂಗಿ, ಮಗಳೇ ಆಗಿದ್ದರೆ ನಾವು ಸಮರ್ಥಿಸುತ್ತೇವೆ. ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ ಅತ್ತೆ ಮಾವನಿಗೊಂದು ನ್ಯಾಯ, ಅಮ್ಮ ಅಪ್ಪನಿಗೆ ಒಂದು ನ್ಯಾಯ, ಮಗ ಮಗಳಿಗೆ ಒಂದು ನಿಯಮ, ಅಳಿಯ ಸೊಸೆಗೊಂದು ನಿಯಮ.

ಇದರ ವಿಸ್ತೃತ ರೂಪವೇ ಇಂದಿನ ಒಟ್ಟು ವ್ಯವಸ್ಥೆಯ ಗೊಂದಲಕ್ಕೆ ಬಹುತೇಕ ಕಾರಣ. ನ್ಯಾಯ ಅನ್ಯಾಯ, ನೀತಿ ಅನೀತಿಗಳ ವಿಷಯ ಬಂದಾಗ ಭಾವನಾತ್ಮಕ ಜೀವಿಗಳಾದ ನಾವು ಪಕ್ಷಪಾತದ ಧೋರಣೆ ಅನುಸರಿಸುತ್ತೇವೆ. ನಮ್ಮ ಮಗ ಅತ್ಯಾಚಾರಿ ಕೊಲೆಪಾತಕನಾದಾಗ ಅದು ನಮಗೆ ಯೌವ್ವನದ ಸಣ್ಣ ಚೇಷ್ಟೇ ಎಂದೇ ಕಾಣುತ್ತದೆ. ಇತರರು ಮಾಡಿದಾಗ ರಸ್ತೆಯಲ್ಲಿ ಗುಂಡು ಹೊಡೆದು ಸಾಯಿಸಬೇಕೆನಿಸುತ್ತದೆ. ನನ್ನ ಗಂಡ/ಹೆಂಡತಿ, ಲೋಕಾಯುಕ್ತರ ಬಲೆಯಲ್ಲಿ ಸಿಲುಕಿದಾಗ ಎಷ್ಟೋ ದೊಡ್ಡ ಭ್ರಷ್ಟರ ನಡುವೆ ಇವರು ತುಂಬಾ ಒಳ್ಳೆಯವರು, ಇಡೀ ವ್ಯವಸ್ಥೆ ಇವರಿಗೆ ಮೋಸ ಮಾಡಿದೆ ಎನಿಸುತ್ತದೆ.

ಸಮಸ್ಯೆಗಳ ಬಗ್ಗೆ ಏನೋ ಹೇಳಿದೆ. ಆದರೆ ಇಂದಿನ ಸಾಮಾಜಿಕ ಆಡಳಿತಾತ್ಮಕ ವ್ಯವಸ್ಥೆಯಲ್ಲಿ ಇದನ್ನು ಮೀರಲು ಸಾಧ್ಯವೇ? ಇದೇ ನಮ್ಮ ಮುಂದಿರುವ ಬಹುದೊಡ್ಡ ಸವಾಲು. ಮನಸ್ಸುಗಳ ಅಂತರಂಗದ ಚಳವಳಿ ಈ ನಿಟ್ಟಿನಲ್ಲಿ ಹೆಚ್ಚು ಹೆಚ್ಚು ತೊಡಗಿಸಿಕೊಳ್ಳುವ ಆಶಯವಿದೆ. ಜನರ ಚಿಂತನಾ ಕ್ರಮವನ್ನು ವಿಶಾಲಗೊಳಿಸಿ ಅವರ ವ್ಯಕ್ತಿತ್ವ ವಿಕಸನಕ್ಕೆ ದಾರಿ ಮಾಡಿಕೊಡುವ ಪ್ರಯತ್ನ ಮುಂದುವರಿಯಲಿದೆ. ಏಕೆಂದರೆ, ಅಗಾಧ ಭಾವನೆಗಳ ಅಕ್ಷಯ ಪಾತ್ರೆ ನಮ್ಮ ಮನಸ್ಸು, ಕ್ಷಣಕ್ಷಣಕ್ಕೂ ಬದಲಾಗುತ್ತಾ ವಿಶಾಲ ಸಾಗರದ ಅಲೆಗಳಂತೆ, ಎತ್ತರದ ಪರ್ವತಗಳ ನೋಟದಂತೆ ದಟ್ಟ ಕಾನನದ ಮಾಲೆಗಳಂತೆ, ಅನಂತ ಆಕಾಶದ ಕೌತುಕದಂತೆ, ಚಲಿಸುತ್ತಲೇ ಇರುತ್ತದೆ. ಕಾಮ, ಕ್ರೋಧ, ಲೋಭ, ಮೋಹ, ಮದ ಮತ್ಸರಗಳು ಇರುವಂತೆ, ಪ್ರೀತಿ, ಪ್ರೇಮ, ಕರುಣೆ, ಮಮತೆಗಳೆಂಬ ಭಾವಗಳೂ ತುಂಬಿ ತುಳುಕುತ್ತವೆ. ಇಲ್ಲಿ ನಾವು ಮಾಡಬೇಕಿರುವುದು ಹೆಚ್ಚೇನೂ ಇಲ್ಲ. ಎಲ್ಲ ಭಾವಗಳಲ್ಲೂ ಸಂಚರಿಸುತ್ತಾ ಪ್ರೀತಿ ಎಂಬ ಭಾವವನ್ನು ಅಪ್ಪಿಕೊಳ್ಳೋಣ. ಪ್ರೀತಿ ಎಂಬ ಭಾವದಲ್ಲಿ ಸ್ಥಾಯಿಯಾಗೋಣ. ಅದೊಂದು ಅದ್ಭುತ ಪ್ರಪಂಚ. ಬೇರೆ ಎಲ್ಲಾ ಭಾವಗಳಿಗೂ ಅಧಿಪತಿ ಈ ಪ್ರೀತಿ ಎಂಬ ಭಾವ. ಇದು ಎಂದೆಂದಿಗೂ ಮುಗಿಯದ ಅಕ್ಷಯ ಭಾವ. ನಿಷ್ಕಲ್ಮಶ ಪ್ರೀತಿಗೆ ಯಾವ ಮಿತಿಯೂ ಇಲ್ಲ. ಹರಿಯಲು ಬಿಡಿ ಪ್ರೀತಿಯನ್ನು.

ಅದು ಮತ್ತಷ್ಟು ವಿಶಾಲವಾಗುತ್ತಾ ಸಾಗುತ್ತದೆ. ನಿರೀಕ್ಷೆಗಳಿಲ್ಲದ, ಸ್ವಾರ್ಥವಿಲ್ಲದ ಪ್ರೀತಿ ನಿಮ್ಮನ್ನು ಆಂತರಿಕವಾಗಿ ಎತ್ತರೆತ್ತರಕ್ಕೆ ಕೊಂಡೊಯ್ಯುತ್ತದೆ. ಪ್ರೀತಿ ಎಂಬ ಭಾವ ಎಲ್ಲಾ ಸಂಬಂಧಗಳನ್ನು ಮೀರಿ ಬದುಕನ್ನು ಸಾರ್ಥಕತೆಯತ್ತಾ ಮುನ್ನಡೆಸುತ್ತದೆ. ಸಾಮಾನ್ಯ ವ್ಯಾವಹಾರಿಕ ಬದುಕಿನಲ್ಲಿ ಇದು ಅತ್ಯಂತ ಕಠಿಣ. ಆದರೆ ನಾನು, ನನ್ನವರು ಮಾತ್ರ ಶ್ರೇಷ್ಠ ಎನ್ನುವ ಸ್ವಾರ್ಥ ಮತ್ತು ಸಂಕುಚಿತತೆ ಮಾತ್ರ ಬೇಡ.

**- ವಿವೇಕಾನಂದ. ಎಚ್. ಕೆ.,** ಬೆಂಗಳೂರು



# ಹೆಬ್ಬೇವು - ಉತ್ತಮ ಬೇಡಿಕೆಯ ಮರ.

ದೇಶದಾದ್ಯಂತ ಪ್ಲೈವುಡ್‌ಗಳಿಗೆ ಭಾರೀ ಬೇಡಿಕೆ ಹುಟ್ಟಿಕೊಂಡಿದೆ. ಅದೇ ರೀತಿಯಲ್ಲಿ ಕಾಗದಕ್ಕೂ ಬಲು ಬೇಡಿಕೆ. ಈ ಎಲ್ಲಾ ಅವಶ್ಯಕತೆಗೆ ಬೇಕಾಗುವ ಮರಮಟ್ಟುಗಳು ಗಟ್ಟಿ ಮುಟ್ಟಾಗಿರಬೇಕಾಗಿಲ್ಲ. ಹಿಂದೆ ಹೊಂಗಾರೆ ಮರಗಳನ್ನು ಇದಕ್ಕೆ ಬಳಕೆ ಮಾಡುತ್ತಿದ್ದರು. ಈಗ ಆ ಮರದ ಕೊರತೆ ಉಂಟಾಗಿದ್ದು, ಅದರ ಬದಲಿಗೆ ಹೆಬ್ಬೇವಿನ ಮರದ ಬಳಕೆ ವ್ಯಾಪಕವಾಗಿದೆ. ಹೆಬ್ಬೇವು, ಹಾಲುಮಡ್ಡಿ, ಮಾಂಜಿಯಂ ಮುಂತಾದ ಮರಮಟ್ಟುಗಳಿಗೆ ಈಗ ಬಾರೀ ಬೇಡಿಕೆ ಬಂದಿದೆ. ಇವುಗಳು ಬೇಗ ಬೆಳೆಯುತ್ತವೆ. ಬೇಗನೆ ಮಾರಾಟ ಮಾಡಬಹುದು. ಉತ್ತಮ ಬೆಲೆಯೂ ಇದೆ.



ಹೆಬ್ಬೇವು ಇದು ಬೇವಿನ ಕುಟುಂಬದ ಒಂದು ಮರಮಟ್ಟು. ಬೇವಿನಲ್ಲಿ ಬಯಲು ಸೀಮೆಯಲ್ಲಿ ಹೆಚ್ಚಾಗಿ ಕಂಡು ಬರುವ ಶುದ್ಧ ಬೇವು ಒಂದು. ಕರಾವಳಿ ಸುತ್ತಮುತ್ತ ಕಂಡು ಬರುವ ಹುಚ್ಚು ಬೇವು ಇನ್ನೊಂದು. ಸುಮಾರಾಗಿ ಎಲ್ಲಾ ಕಡೆಯಲ್ಲೂ ಕಂಡು ಬರುವ ಹೆಬ್ಬೇವು ಎಂಬ ಮೂರು ಪ್ರಕಾರಗಳಿವೆ. ಹೆಬ್ಬೇವು ಎಲ್ಲದಕ್ಕಿಂತ ವೇಗವಾಗಿ ಬೆಳೆಯಬಲ್ಲ ಮರಮಟ್ಟು. ಇದರ ವೈಜ್ಞಾನಿಕ ಹೆಸರು ಮಿಲಿಯಾ ದುಬಿಯಾ.

ಹೆಬ್ಬೇವಿನ ಮರ ಎಲ್ಲಾ ಪ್ರದೇಶಗಳಲ್ಲೂ ಬೆಳೆಯುತ್ತದೆ. ಆಳವಾದ ಮಣ್ಣು, ಹಿತ ಮಿತ ನೀರಾವರಿಯಲ್ಲಿ ಬಲು ಬೇಗ ಬೆಳೆಯುತ್ತದೆ. ತೋಟಗಾರಿಕಾ ಬೆಳೆಗಳಾದ ತೆಂಗು, ಅಡಿಕೆ, ದಾಳಿಂಬೆ ಮುಂತಾದ ಬೆಳೆಗಳ ಮಧ್ಯೆ ಬೆಳೆಸಬಹುದು. ಹೊಲದ ಬದುಗಳಲ್ಲಿ ಬೆಳೆಸಬಹುದು


ಇದನ್ನು ಪ್ಲೈವುಡ್ ತಯಾರಕರು ಖರೀದಿ ಮಾಡುತ್ತಾರೆ. ಇದನ್ನು ಕೊಡು ಕೊಳ್ಳುವ ಕರಾರಿನ ಮೇಲೆ ಬೆಳೆಸುವವರೂ ಇದ್ದಾರೆ. ಈಗಿನ ಮಾರುಕಟ್ಟೆ ಧಾರಣೆಯಲ್ಲಿ ಇಂದು ಟನ್ ಮರಕ್ಕೆ 7,000 - 9,000 ರೂ ತನಕ ಇದೆ. ಸುಮಾರಾಗಿ 10 ವರ್ಷ ಬೆಳೆದ ಮರವು 3-4 ಟನ್ ತೂಗುತ್ತದೆ. ನೆಟ್ಟು ಮೂರು ನಾಲ್ಕನೇ ವರ್ಷಕ್ಕೆ ಸುಮಾರು 1 ಅಡಿ ಸುತ್ತಳತೆ ಬರುತ್ತದೆ. ಸುಮಾರು 20 ಅಡಿಗೂ ಹೆಚ್ಚು ಎತ್ತರಕ್ಕೆ ಬೆಳೆಯುತ್ತದೆ. ಕರ್ನಾಟಕದ ಚಿತ್ರದುರ್ಗ, ಬಳ್ಳಾರಿ, ತುಮಕೂರು, ಮೈಸೂರು, ಚಾಮರಾಜನಗರ, ಹುಣಸೂರು, ಬೆಂಗಳೂರು, ದೊಡ್ಡಬಳ್ಳಾಪುರ, ಮುಂತಾದ ಕಡೆ ಇದನ್ನೇ ವ್ಯವಸಾಯವಾಗಿ ಮಾಡಿದವರೂ ಇದ್ದಾರೆ. ಹುಣಸೂರು, ಪಿರಿಯಾಪಟ್ಟಣ, ಮೈಸೂರು, ಕುಶಾಲನಗರದ ಮೂಲಕ ಪ್ರಯಾಣಿಸುವಾಗ ಇದರ ಹಲವಾರು ತೋಟಗಳು ಕಾಣಸಿಗುತ್ತವೆ.

ಇದು ಹೊಸ ಮರವೇನೂ ಅಲ್ಲ. ಬಹಳ ಹಿಂದಿನಿಂದಲೂ ರೈತರು ತಮ್ಮ ಹೊಲದ ಬದುಗಳಲ್ಲಿ ಬೆಳೆಸುತ್ತಿದ್ದರು. ಉರುವಲಿಗೆ ಮತ್ತು ಕೆಲವು ಕೃಷಿ ಉಪಯೋಗಕ್ಕೆ ಬಳಸುತ್ತಿದ್ದರು. ಇದು ವೇಗವಾಗಿ ಬೆಳೆಯುವ ಕಾರಣ, ಪ್ಲೈವುಡ್ ಉಪಯೋಗ ಹೆಚ್ಚುತ್ತಿದ್ದು, ಅದಕ್ಕೆ ಸೂಕ್ತವಾದ ಮರಮಟ್ಟುಗಳು ತುಂಬಾ ಕಡಿಮೆಯಾದ ಕಾರಣ ಇದಕ್ಕೆ ವಾಣಿಜ್ಯ ಮಹತ್ವ ಬಂದಿದೆ. ಅರಣ್ಯ ಇಲಾಖೆ ಇದನ್ನು ಬಹಳ ಹಿಂದಿನಿಂದಲೂ ಹೇಳುತ್ತಾ ಬಂದಿತ್ತು. ಇದು ಸಾಕಷ್ಟು ಎಲೆಯನ್ನೂ ಹೊಂದಿದೆ, ಅಷ್ಟೇ ಸಾವಯವ ಅಂಶವನ್ನು ಮಣ್ಣಿಗೆ ಕೊಡುತ್ತದೆ.



ಬೀಜದಿಂದ ಇದರ ಸಸ್ಯಾಭಿವೃದ್ದಿ ಮಾಡಬಹುದು. ಸುಮಾರು 7-8 ವರ್ಷ ದಾಟಿದ ಮರ ಮಾರ್ಚ್ ಎಪ್ರಿಲ್ ತಿಂಗಳಲ್ಲಿ ಕಾಯಿ ಬಿಡುತ್ತದೆ. ಬೆಳೆದು ಅದು ಉದುರುತ್ತದೆ. ಈ ಕಾಯಿಯನ್ನು ತಾಜಾ ರೀತಿಯಲ್ಲಿ ಮೊಳಕೆ ಬರಲು ಹಾಕಿದರೆ ಸುಮಾರು 60 % ಮೊಳಕೆ ಬರುತ್ತದೆ. ಬೀಜಗಳನ್ನು ತಾಜಾ ಇರುವಾಗಲೇ ಸಂಗ್ರಹಿಸಿ ಅದನ್ನು ನೀರಿನಲ್ಲಿ ಚೆನ್ನಾಗಿ ತೊಳೆದು ತೇಲುವ ಬೀಜಗಳನ್ನು ಪ್ರತ್ಯೇಕಿಸಿ ಮುಳುಗುವ ಬೀಜಗಳನ್ನು ಮಾತ್ರ ಮಣ್ಣಿನ ಬೆಡ್‌ನಲ್ಲಿ ಹಾಕಿ ಮೊಳಕೆ ಬರಲು ಹಾಕಬೇಕು. (ಮರಳಿನಲ್ಲಿ ಮೊಳಕೆ ಬರಲಾರದು) ಮೊಳಕೆ ಬರಿಸುವ ಬೆಡ್‌ಗೆ ಟರ್ಪಾಲು ಶೀಟು ಹಾಕಿ, ಬಿಸಿ ಇರುವಂತೆ ನೋಡಿಕೊಂಡರೆ ಮೊಳಕೆ ವೇಗವಾಗಿ ಬರುತ್ತದೆ. ಸುಮಾರು 90 ದಿನದಲ್ಲಿ ಮೊಳಕೆ ಒಡೆಯುತ್ತದೆ. ಮೊಳೆತ ಬೀಜಗಳನ್ನು ನಂತರ ಪಾಲಿಥೀನ್ ಚೀಲದಲ್ಲಿ ಹಾಕಿ ಸಸಿ ಮಾಡಿಕೊಳ್ಳಬೇಕು. ನಾಟಿ ಮಾಡುವಾಗ ಸುಮಾರು 10 ಅಡಿಗೊಂದರಂತೆ ನಾಟಿ ಮಾಡಬಹುದು. ಒಂದು ಎಕರೆ ಹೆಬ್ಬೇವು ಬೆಳೆಸಿದರೆ ಸುಮಾರು 8-10 ಲಕ್ಷ ವರಮಾನವನ್ನು ಸುಮಾರು 10 ವರ್ಷಗಳಲ್ಲಿ ಯಾವುದೇ ಖರ್ಚು ಇಲ್ಲದೆ ಸಂಪಾದಿಸಬಹುದು. ಇದರ ಸಸಿಗಳನ್ನು ಈಗ ಆನ್‌ಲೈನ್( ಅಮೇಝೂನ್ ಇತ್ಯಾದಿ) ನಲ್ಲೂ ಖರೀದಿ ಮಾಡಬಹುದು.

**- ರಾಧಾಕೃಷ್ಣ** ಹೊಳ್ಳ



# ಸರಕಾರಿ ನೌಕರರ ವೃತ್ತಿಪರತೆ ಹೆಚ್ಚಲಿ

ರಾಜ್ಯ ಸರಕಾರಿ ನೌಕರರ ಮುಂಬಡ್ತಿಗೆ ಕೇವಲ ಸೇವಾ ಜೇಷ್ಠತೆ ಮತ್ತು ಅನುಭವವನ್ನಷ್ಟೇ ಪರಿಗಣಿಸದೆ, ಇನ್ನು ಮುಂದೆ ಅಗತ್ಯ ತರಬೇತಿಯನ್ನು ಕಡ್ಡಾಯಗೊಳಿಸಿರುವುದು ಆಡಳಿತ ಸುಧಾರಣೆಯ ದೃಷ್ಟಿಯಿಂದ ಅತ್ಯಂತ ಆಶಾದಾಯಕ ಮತ್ತು ಸಮಯೋಚಿತ ಕ್ರಮವಾಗಿದೆ. ಕರ್ನಾಟಕ ರಾಜ್ಯ ನಾಗರಿಕ ಸೇವೆಗಳ (ಮುಂಬಡ್ತಿಗೆ ತರಬೇತಿ ಕಡ್ಡಾಯ) ನಿಯಮಗಳು-2026ರ ಅಂತಿಮ ಅಧಿಸೂಚನೆಯು ಸರಕಾರಿ ಯಂತ್ರದ ಕಾರ್ಯವೈಖರಿಯಲ್ಲಿ ಹೊಸ ಚೈತನ್ಯ ತುಂಬುವ ನಿರೀಕ್ಷೆಯಿದೆ. ಈ ಮಹತ್ವದ ಬದಲಾವಣೆಯು ಆಡಳಿತದಲ್ಲಿ ವೃತ್ತಿಪರತೆ ಮತ್ತು ದಕ್ಷತೆ ಹೆಚ್ಚಿಸುವಲ್ಲಿ ಮೈಲುಗಲ್ಲಾಗಲಿದೆ ಎನ್ನುವುದರಲ್ಲಿ ಸಂಶಯವಿಲ್ಲ.

ಖಾಸಗಿ ವಲಯದಲ್ಲಿಯೂ ಬಡ್ತಿ ಮಾನದಂಡಗಳು ಇಂಥದ್ದೇ ಅರ್ಹತೆಯ ಮಾದರಿಯಲ್ಲಿ ಇರುತ್ತವೆ. ಆದರೆ, ಸಾಮಾನ್ಯವಾಗಿ ಸರಕಾರಿ ವಲಯದಲ್ಲಿ ಒಮ್ಮೆ ಉದ್ಯೋಗ ದೊರೆತರೆ ಸಾಕು, ನಿವೃತ್ತಿಯವರೆಗೆ ಕೇವಲ ಕಾಲಮಿತಿಯ ಬಡ್ತಿಗಳನ್ನು ಪಡೆಯುತ್ತಾ ಸಾಗುವ ಪ್ರವೃತ್ತಿ ದಶಕಗಳಿಂದ ಮನೆಮಾಡಿದೆ. ಇದರಿಂದಾಗಿ ಬದಲಾಗುತ್ತಿರುವ ಕಾಲಘಟ್ಟಕ್ಕೆ ತಕ್ಕಂತೆ ಹೊಸ ಕೌಶಲ ಮೈಗೂಡಿಸಿಕೊಳ್ಳುವ ಉತ್ಸಾಹ ಸಾಕಷ್ಟು ನೌಕರರಲ್ಲಿ ಕುಂಠಿತವಾಗುತ್ತಿತ್ತು. ಆದರೆ, ಇಂದಿನ ತಂತ್ರಜ್ಞಾನ ಆಧಾರಿತ ಯುಗದಲ್ಲಿ ಈ ಧೋರಣೆ ಆಡಳಿತಕ್ಕೆ ಮಾರಕ. ನಿನ್ನೆಯ ತಂತ್ರಜ್ಞಾನ ಇಂದು ಹಳತಾಗುತ್ತಿರುವ, ಕೃತಕ ಬುದ್ಧಿಮತ್ತೆಯಂಥ (ಎಐ) ಕ್ರಾಂತಿಕಾರಿ ಬದಲಾವಣೆಗಳು ಆಡಳಿತದ ಅಂಗವಾಗುತ್ತಿರುವ ಈ ಕಾಲದಲ್ಲಿ, ನೌಕರರು ಅಪ್ಡೇಟ್ ಆಗುವುದು ಅನಿವಾರ್ಯ. ಈ ನಿಟ್ಟಿನಲ್ಲಿ ಕೇಂದ್ರ ಸರಕಾರದ ಕ್ಷಮತೆ ನಿರ್ಮಾಣ ಆಯೋಗದ ಮಾದರಿಯಲ್ಲೇ ರಾಜ್ಯ ಸರಕಾರ ಹೆಜ್ಜೆ ಇಟ್ಟಿರುವುದು ಅಭಿನಂದನೀಯ.


ಮುಂಬಡ್ತಿ ಎಂಬುದು ಕೇವಲ ಹಕ್ಕಾಗದೆ, ಅದು ಅರ್ಹತೆಯ ಸಂಕೇತವಾಗಬೇಕು. ತರಬೇತಿಯನ್ನು ಕಡ್ಡಾಯಗೊಳಿಸುವುದರಿಂದ ನೌಕರರಲ್ಲಿ ಜವಾಬ್ದಾರಿಯ ಅರಿವು ಹೆಚ್ಚುವುದಲ್ಲದೆ, ಉನ್ನತ ಹುದ್ದೆಯ ಸವಾಲುಗಳನ್ನು ಎದುರಿಸಲು ಅವರು ಸನ್ನದ್ದರಾಗುತ್ತಾರೆ. ಇದರಿಂದ ಸಾರ್ವಜನಿಕರಿಗೆ ಸಿಗುವ ಸೇವೆಯ ಗುಣಮಟ್ಟವೂ ಉತ್ತಮಗೊಳ್ಳುತ್ತದೆ, ವೇಗಗೊಳ್ಳುತ್ತದೆ. ಹೊಸ ನಿಯಮದ ಪ್ರಕಾರ, ಬಡ್ತಿ ಪಡೆಯುವ ಪ್ರತಿಯೊಬ್ಬ ನೌಕರನೂ ತನ್ನ ಮುಂದಿನ ಜವಾಬ್ದಾರಿಗೆ ಪೂರಕವಾದ ಆಧುನಿಕ ತಾಂತ್ರಿಕ ಜ್ಞಾನ ಮತ್ತು ನಿರ್ವಹಣಾ ಕೌಶಲ ಕಲಿಯಲೇಬೇಕಾಗುತ್ತದೆ. ಇದು ಕೇವಲ ವೈಯಕ್ತಿಕ ಅಭಿವೃದ್ಧಿಯಲ್ಲದೆ, ಇಡೀ ರಾಜ್ಯದ ಆಡಳಿತ ವ್ಯವಸ್ಥೆಯನ್ನು ಬಲಪಡಿಸುವ ವಿಚಾರವೂ ಹೌದು.

ಆದರೆ, ಈ ನಿಯಮ ಕೇವಲ ಕಾಗದದ ಮೇಲೆ ಉಳಿಯದೆ ಸಮರ್ಪಕವಾಗಿ ಅನುಷ್ಠಾನಕ್ಕೆ ಬರಬೇಕಿದೆ. ನೀಡಲಾಗುವ ತರಬೇತಿಯು ಕೇವಲ ಔಪಚಾರಿಕವಾಗಿರದೆ. ಪ್ರಾಯೋಗಿಕ ಮತ್ತು ಗುಣಮಟ್ಟದಿಂದ ಕೂಡಿರಬೇಕು. ತರಬೇತಿ ಕೇಂದ್ರಗಳ ಮೂಲಸೌಕರ್ಯ ಮತ್ತು ತರಬೇತುದಾರರ ಸಾಮರ್ಥ್ಯವೂ ಅಷ್ಟೇ ಮುಖ್ಯವಾಗಬೇಕು ಅಡೆತಡೆಗಳಿಲ್ಲದ, ಪಾರದರ್ಶಕ ತರಬೇತಿ ವ್ಯವಸ್ಥೆ ರೂಪಿಸಿದರೆ ಮಾತ್ರ, ಸರಕಾರದ ಈ ಆಶಯ ಸಫಲವಾಗಲು ಸಾಧ್ಯ.

# ಶಕ್ತಿ ದೇಹದಲ್ಲಿ ಇದ್ದರೆ ಸಾಲದು ಯುಕ್ತಿ ತಲೆಯಲ್ಲೂ ಇರಬೇಕು

ಒಂದು ಊರಿನ ಬಯಲು. ಹಲವಾರು ಟಗರುಗಳು ಬಯಲಲ್ಲಿರುವ ಹುಲ್ಲನ್ನು ಮೇಯುತ್ತಿದ್ದವು. ಅದೇ ಸಂದರ್ಭಕ್ಕೆ ಅಲ್ಲಿಗೆ ಹಸಿದ ತೋಳವೊಂದು ಆಹಾರ ಹುಡುಕುತ್ತಾ ಬಂತು. ಸತ್ತಲೂ ನೋಡಿದಾಗ ಅನೇಕ ಟಗರುಗಳು ಅಲ್ಲಿ ಹುಲ್ಲ ಮೇಯುತ್ತಿರುವುದು ಕಂಡಿತು. ಅದರಲ್ಲಿ ಒಂದು ದಷ್ಟಪುಷ್ಟವಾದ ಟಗರಿತ್ತು. ಇದನ್ನು ನಾನಿವತ್ತು ಕೊಂದು ತಿಂದರೆ ಇನ್ನು ಒಂದು ವಾರಕ್ಕೆ ಹಸಿವಿರುವುದಿಲ್ಲ; ಏನಾದರಾಗಲಿ ಇಂದಿದನ್ನು ಕೊಂದೇ ಸಿದ್ದ ಎಂದು ಮನಸ್ಸಿನಲ್ಲೆ ಮಂಡಕ್ಕಿ ತಿನ್ನುತ್ತಾ ಮೆಲ್ಲನೆ ಪೊದೆಯ ಹಿಂದೆ ಬೇಟೆಗಾಗಿ ಕಾದು ಕುಳಿತಿತು.

ಟಗರು ಹುಲ್ಲನ್ನು ಅರಸುತ್ತಾ ಅದೇ ಪೊದೆಯ ಹತ್ತಿರ ಬಂತು. ಇದೇ ಸಮಯಕ್ಕೆ ಕಾದು ಕುಳಿತಿದ್ದ ತೋಳ ಥಂಗನೆ ಟಗರನ್ನು ಹಿಡಿಯಲು ಅದರೆಡೆಗೆ ಹಾರಿತು. ಚಾಣಾಕ್ಯ ಟಗರು ತೋಳದಿಂದ ತಪ್ಪಿಸಿ ದೂರ ನಿಂತು ಹೀಗೆ ಹೇಳಿತು.... ಎಲೈ ತೋಳವೆ, ನೀನು ನನ್ನನ್ನು ಕೊಂದು ತಿನ್ನ ಬಹುದು. ಆದರೆ ಒಂದು ಶರತ್ತು! ಏನದು? ಎಂದು ತೋಳ ಕೇಳಿದಾಗ ಬಯಲಿನ ನಡುವೆ ಒಂದು ಮಾವಿನ ಮರವಿದೆ ; ಅದರಲ್ಲಿ ಯಥೇಚ್ಚ ಮಾವಿನ ಹಣ್ಣುಗಳಿವೆ. ನಿನಗೆ ಆಹಾರವಾಗುವ ಮೊದಲು ಆ ಮಾವಿನ ಹಣ್ಣುಗಳನ್ನು ತಿನ್ನುವ ಆಸೆಯಾಗಿದೆ. ನೀನು ನನಗಿಂತ ಬಲಶಾಲಿ ಒಂದಷ್ಟು ಹಣ್ಣುಗಳನ್ನು ನನಗಾಗಿ ಉದುರಿಸಿ ಕೊಡು ನಾನದನ್ನು ತಿಂದು ನನ್ನಾಸೆಯನ್ನು ತಣಿಸಿಕೊಳ್ಳುವೆ ಎಂದಿತು. ತೋಳ ದೊಡ್ಡದಾಗಿ ಬಾಯಿ ತೆರೆದು ನಗುತ್ತಾ, ಅಷ್ಟೆಯಾ....! ಎನ್ನುತ್ತಾ ಟಗರನ್ನು ಮಾವಿನ ಮರದ ಹತ್ತಿರ ತಾನೆ ಕರೆದೊಯ್ಯಿತು. ನಂತರ ದೂರದಿಂದ



ಶರವೇಗದಲ್ಲಿ ಓಡುತ್ತಾ ಬಂದು ತಲೆಯಿಂದ ಮರಕ್ಕೆ ಜೋರಾಗಿ ಡಿಕ್ಕಿ ಹೊಡೆಯಿತು. ಹೊಡೆದ ರಭಸಕ್ಕೆ ಮಾವಿನ ಹಣ್ಣು ಬೀಳುವುದು ಬಿಟ್ಟು ತಲೆಯೇ ಎರಡು ಹೋಳಾಗಿ ತೋಳ ಸತ್ತು ಬಿದ್ದಿತು. ಹೀಗೆ ಟಗರು ಬಂದಂತಹ ಪ್ರಾಣಾಪಯದಿಂದ ತಪ್ಪಿಸಿಕೊಂಡಿತು.

**- ಹಾ ಮ ಸತೀಶ** ಬೆಂಗಳೂರು

# ಸಾಧಕರೊಂದಿಗೆ ಸಾಧನೆ

ನಾವು ಯಾರ ಜೊತೆ ಹೆಚ್ಚಿನ ಸಮಯವನ್ನು ಕಳೆಯುತ್ತೇವೆಯೋ ಅವರಂತೆಯೇ ಆಗಿಬಿಡುತ್ತೇವೆ. ಗೊತ್ತಿದ್ದೋ, ಗೊತ್ತಿಲ್ಲದೆಯೋ, ನಮ್ಮ ಸಾಮರ್ಥ್ಯದ ಅರಿವು ನಮ್ಮ ಗಮನಕ್ಕೆ ಬಾರದೆ ಹೋಗಿಬಿಡುತ್ತದೆ. ನಮ್ಮ ಚಿಂತನೆ, ಕಲ್ಪನೆ, ನಡವಳಿಕೆ ಎಲ್ಲವೂ ಜೊತೆಗಾರರ ಸಾಮರ್ಥ್ಯದ ಮಿತಿಯಲ್ಲಿಯೇ ಉಳಿದುಬಿಡುತ್ತದೆ. ನಮ್ಮ ಸಾಮರ್ಥ್ಯವನ್ನು ಗುರುತಿಸಿಕೊಳ್ಳದ ಮನಸ್ಥಿತಿಗೆ, ತಿಳಿಯದೆ ತಲುಪಿ ಬಿಡುತ್ತೇವೆ.

ಒಂದು ಬಾರಿ ಹದ್ದು ಒಂದು ತನ್ನ ಮೊಟ್ಟೆಗಳನ್ನು ಕೋಳಿಯ ಗೂಡಿನಲ್ಲಿ ಇಷ್ಟು ಹಾರಿ ಹೋಯಿತು. ಮತ್ತೆ ಅದು ಮರಳಿ ಬರಲೇ ಇಲ್ಲ, ಕೋಳಿ ತನ್ನ ಮೊಟ್ಟೆಗಳೊಂದಿಗೆ ಹದ್ದಿನ ಮೊಟ್ಟೆಗೂ ಕಾವು ಕೊಡಲು ಆರಂಭಿಸಿತು. ಒಂದು ದಿನ ಮೊಟ್ಟೆ ಒಡೆದು ಮರಿ ಹೊರಬಂದಿತು. ಗಾತ್ರದಲ್ಲಿ, ಆಕಾರದಲ್ಲಿ ಹದ್ದಿನ ಮರಿ ಭಿನ್ನವೇ ಆಗಿತ್ತು. ಯಾವುದನ್ನೂ ಅರಿಯದ ಮರಿ, ಬೇರೆಲ್ಲ ಮರಿಗಳೊಂದಿಗೆ ತಾನೂ ಕೋಳಿಯ ಮರಿಯೇ ಎಂದು ಭಾವಿಸಿ, ಬೆಳೆಯ ತೊಡಗಿತು. ಬೆಳೆಯುತ್ತಾ ಬೆಳೆಯುತ್ತಾ ಕೋಳಿಯ ಮರಿಗಳಂತೆ ಕಾಲಿನಲ್ಲಿ ಕಾಳುಗಳನ್ನು ಕೆದಕುತ್ತಾ. ಅದನ್ನೇ ತಿನ್ನುತ್ತಾ, ಕೋಳಿಯಂತೆಯೇ ವರ್ತಿಸುತ್ತಾ ಹೋಯಿತು. ತನಗೆ ಹಾರಲು ಸಾಧ್ಯವಿದೆ ಎನ್ನುವ ಕಲ್ಪನೆಯು ಸಹ ಹದ್ದಿನ ಮರಿಯಲ್ಲಿ ಮೂಡಲಿಲ್ಲ. ಹಾಗಾಗಿ ಅದು ಹಾರುವ ಪ್ರಯತ್ನವನ್ನೇ ಮಾಡಲಿಲ್ಲ.

ಒಮ್ಮೆ ಹದ್ದಿನ ಮರಿ, ಆಕಾಶದಲ್ಲಿ ಎತ್ತರದಲ್ಲಿ ಹಾರಾಡುತ್ತಿದ್ದ ಹದ್ದನ್ನು ಕಂಡು, ಕೋಳಿಯ ಬಳಿ ಇಷ್ಟು ಸುಂದರವಾದ ಪಕ್ಷಿ ಯಾವುದು? ಎಷ್ಟು ಎತ್ತರದಲ್ಲಿ ಹಾರುತ್ತಿದೆ! ಅದರ ರೆಕ್ಕೆಗಳೆಷ್ಟು ಬಲಿಷ್ಠವಾಗಿವೆಯಲ್ಲವೇ? ಎಂದು ಆಶ್ಚರ್ಯ ವ್ಯಕ್ತಪಡಿಸಿತು. ಅದಕ್ಕೆ ಕೋಳಿ ಅದು ಹದ್ದು. ಅತ್ಯಂತ ಎತ್ತರದಲ್ಲಿ ಹಾರುವ ಪಕ್ಷಿ. ಅದು ಪಕ್ಷಿಗಳಲ್ಲಿಯೇ ಅತ್ಯಂತ ಶಕ್ತಿಶಾಲಿಯಾದ ಪಕ್ಷಿಯೂ ಹೌದು. ಅದು ಮೋಡಗಳಿಗಿಂತ ಎತ್ತರದಲ್ಲಿ ಹಾರುತ್ತದೆ. ಆದರೆ ನಿನಗದು ಸಾಧ್ಯವಿಲ್ಲ, ಏಕೆಂದರೆ ನೀನು ಕೋಳಿ ಎಂದಿತು.



ಹದ್ದಿನ ಮರಿ ತನ್ನನ್ನು ತಾನು ಪರಾಂಬರಿಸಿ ನೋಡಿಕೊಳ್ಳುವ ಪ್ರಯತ್ನವನ್ನೇ ಮಾಡಲಿಲ್ಲ. ತನ್ನ ಸಾಮರ್ಥ್ಯವನ್ನು ಒರೆಗೆ ಹಚ್ಚುವ ಸಾಹಸವನ್ನೂ ಮಾಡಲಿಲ್ಲ, ಕೋಳಿ ಹೇಳಿದ ಮಾತನ್ನು ಪೂರ್ಣವಾಗಿ ನಂಬಿಬಿಟ್ಟಿತು. ಅ ಮಾತನ್ನು ಸ್ವಲ್ಪವಾದರೂ ವಿಮರ್ಶಿಸಬೇಕು. ಎಂದು ಅದಕ್ಕೆ ಹೊಳೆಯಲೇ ಇಲ್ಲ, ತನ್ನ ಜೀವಿತಾವಧಿಯನ್ನೆಲ್ಲಾ ಕೋಳಿಯಾಗಿಯೇ ಬದುಕಿ ಬಿಟ್ಟಿತು ತಾನು ಯಾರೆಂಬುದನ್ನು ಸಹ ತಿಳಿಯದೆ ಅದರ ಅಂತ್ಯವಾಯಿತು.

ಹದ್ದಿನಂತೆ ಹಾರಾಡಬೇಕಾದರೆ ಅದರ ರೀತಿ,-ನೀತಿಗಳನ್ನು ಕಲಿಯಬೇಕು. ಹಾಗೆ ಕಲಿಯಬೇಕಾದರೆ ಹದ್ದುಗಳ ಜೊತೆಯಲ್ಲೇ ಇರಬೇಕು. ಸಾಧಕರೊಂದಿಗೆ ಸಾಧನೆ ಮಾಡಬಹುದಾದರೆ, ಚಿಂತಕರೊಂದಿಗೆ ಚಿಂತನೆ ನಡೆಸಬಹುದು. ಎತ್ತರದಲ್ಲಿ ಹಾರಾಡಲು ಎತ್ತರದ ಜ್ಞಾನವಿರಬೇಕು. ಅದಕ್ಕಾಗಿ ಅಂತದೇ ಕನಸುಗಳು ಬೇಕು. ಕನಸು ಕಾಣಲು ಸ್ವ. ಸಾಮರ್ಥ್ಯದ ಅರಿವಿರಬೇಕು.

**- ಮಾಯಾ** ಬಾಲಚಂದ್ರ

